ಯಲ್ಲಿ ಭಾಗವಹಿಸಿ ವಿಷಯವನ್ನು ಪ್ರಸ್ತಾಪ ಮಾಡಬೇಕು. ಮೇಲಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಎದುರಿಗೆ ಹೇಳಿದ್ದಾರೆ. ಆದಾಗ್ಯೂ ನೀವು ನಿಮ್ಮ ಬೇಡಿಕೆ ಮತ್ತು ಒತ್ತಾಯವಿದೆ, ಆ ಒತ್ತಾಯವನ್ನು ಇನ್ನೂ ವಿಸ್ತಾರವಾಗಿ ಸದನದ ಮುಂದೆ ಪ್ರಸ್ತಾಪ ಮಾಡಿದರೆ ಸದನವೂ ಕೂಡ ಅದಕ್ಕೆ ತನ್ನ ಸಮಿತಿ ಯನ್ನು ನೀಡುತ್ತದೆ. ಆ ದೃಷ್ಟಿಯಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ನಮ್ಮ ಮನವಿಯನ್ನು ತಾವು ಆತ್ಮೀಯತೆಯಿಂದ ಸ್ವೀಕಾರ ಮಾಡ ಬೇಕು. ಮಾನ್ಯ ಯಡಿಯೂರಪ್ಪನವರೆ, ಏನಾದರೂ ಹೇಳಿ. ಈಗ ಚರ್ಚೆ ಬೇಡವೇ? ನಾಳೆ ತೆಗೆದುಕೊಳ್ಳೋಣವೇ? ಮಾನ್ಯ ಜಗದೀಶ್ ಶೆಟ್ಟರ್‌ರ ವರದ್ದೂ ಇದೆ. ಹಾಗಾದರೆ ಇಲ್ಲಿ ಚರ್ಚೆ ಮಾಡುವವರು ಯಾರು? ಇನ್ನು ಒಂದು ಗಂಟೆ ಕಾಲ ಕುಳಿತುಕೊಂಡು ಬೇಕಾದರೆ ಚರ್ಚೆ ಮಾಡೋಣ. ಶ್ರೀ ಗೋವಿಂದ ಕಾರಜೋಳರವರೆ, ತಾವು ಕಬ್ಬು ಬೆಳೆಗಾರರ ಬಗ್ಗೆ ಮಾತನಾಡುತ್ತೀರಾ?

8. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ :- ಕಬ್ಬು ಬೆಳೆಗೆ ಬೆಲೆ ನಿಗಧಿಪಡಿಸುವ ಬಗ್ಗೆ

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ) :-ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆ ಇಂದು ಮತ್ತು ನಿನ್ನೆಯದಲ್ಲ. ಪ್ರತಿ ವರ್ಷವೂ ಕೂಡ ಕಬ್ಬು ಬೆಳೆಗಾರರು ತಾವು ಬೆಳೆದಂತಹ ಬೆಳೆಗೆ ವೈಜ್ಞಾನಿಕವಾದಂತಹ ಬೆಲೆಯನ್ನು ಕೊಡಬೇಕೆಂದು ಹೇಳಿ ಕಳೆದ 40 ವರ್ಷಗಳಿಂದ ಹೋರಾಟ ವನ್ನು ಮಾಡುತ್ತಿದ್ದಾರೆ. ಈ ಹೋರಾಟವನ್ನು ಕೊನೆಗಾಣಿಸಬೇಕು, ಪ್ರತಿ ವರ್ಷವೂ ಕೂಡ ರೈತರು ಬೀದಿಗೆ ಬರಬಾರದು ಎಂದು ಹೇಳಿ ಕಳೆದ ವರ್ಷ SAP ಕಾನೂನನ್ನು ಜಾರಿಗೆ ತರುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. SAP ಕಾನೂನಿನಲ್ಲಿ ಇರುವಂತಹ ಅವಕಾಶವೇನೆಂದರೆ, ಹಂಗಾಮು ಪ್ರಾರಂಭ ವಾಗುವುದಕ್ಕಿಂತಲೂ ಮುಂಚೆ ಸಭೆ ಕರೆದು ವೈಜ್ಞಾನಿಕವಾದಂತಹ ಬೆಲೆಯನ್ನು

ನಿಗದಿ ಮಾಡಬೇಕು, revenue sharing ಆಗಬೇಕೆನ್ನುವುದು ಆ ಆದೇಶ ದಲ್ಲಿರುವುದು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಬಹಳ ಗಂಭೀರವಾದಂತಹ ವಿಷಯ ವನ್ನು ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಕಾರಜೋಳರವರು ಪ್ರಾರಂಭ ಮಾಡಿದ್ದಾರೆ. ಸಂಬಂಧಪಟ್ಟಂತಹ ಸಕ್ಕರೆ ಸಚಿವರು ಸದನದಲ್ಲಿರುವುದಿಲ್ಲ. ಇದನ್ನು ಯಾರು ಕೇಳುತ್ತಾರೆ?

ಅಧ್ಯಕ್ಷರು :- ಮಾನ್ಯ parliamentary Affairs Minister ರವರು ಸದನದಲ್ಲಿದ್ದಾರೆ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : Parlimentary Affairs Minister ಇಲ್ಲಿ ಇರಬಹುದು ಸಂಬಂಧಪಟ್ಟಂತಹ ನಮ್ಮ ಜಿಲ್ಲೆಯವರಾದ ಸಕ್ಕರೆ ಸಚಿವರು at least ಈ ಗಂಭೀರವಾದಂತಹ ಚರ್ಚೆಯಲ್ಲಿ ಭಾಗವಹಿಸಬೇಕು. ಇದನ್ನು ಅವರು ಅರ್ಥಮಾಡಿಕೊಳ್ಳಬೇಕು. ಮಾನ್ಯ ಅಧ್ಯಕ್ಷರೆ ತಾವು ನಮ್ಮ ಸಹಾಯಕ್ಕೆ ಬರಬೇಕು. ಸುಮಾರು 50,000 ಜನ ರೈತರು ಧರಣಿ ಕುಳಿತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು ಮಾನ್ಯ ಮಂತ್ರಿಗಳನ್ನು ಕರೆಸಬೇಕು.

ಶ್ರೀ ಟಿ.ಬಿ.ಜಯಚಂದ್ರ :- ಈಗ ತಾವು ಚರ್ಚೆಯನ್ನು ಮಾಡುತ್ತಿದ್ದೀರಿ. ಬಹಳಷ್ಟು ಜನರು ಸರ್ಕಾರದ ಗಮನ ಸೆಳೆಯುತ್ತಿದ್ದಾರೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಸಕ್ಕರೆ ಸಚಿವರನ್ನು ಸದನಕ್ಕೆ ಕರೆಸಿ.

ಶ್ರೀ ಟಿ.ಬಿ. ಜಯಚಂದ್ರ :- ಇನ್ನೂ 4-5 ಜನರು ಮಾತನಾಡುವವ ರಿದ್ದೀರಿ. ನೀವು ಮಾತನಾಡಿ ಅದಕ್ಕೆ ಉತ್ತರವನ್ನು ಕೊಡಿಸೋಣ.

(ಈ ಹಂತದಲ್ಲಿ ಶ್ರೀ ಬಿ.ಆರ್.ಯಾವಗಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಛೇರ್ಮನ್‌ರವರೆ, ಪ್ರತಿ ವರ್ಷ ಕಬ್ಬು ಬೆಳೆಗಾರರು ಬೀದಿಗೆ ಇಳಿದು ಹೋರಾಟವನ್ನು ಮಾಡಬಾರದು ಅವರು ಬೆವರು ಸುರಿಸಿ ದುಡಿದಿರುವುದಕ್ಕೆ ಪ್ರತಿಫಲವಾಗಿ ಒಳ್ಳೆಯ ರೇಟ್ ಸಿಗಬೇಕೆಂದು ಹೇಳಿ ಕಳೆದ ವರ್ಷ SAP ಕಾನೂನನ್ನು ಜಾರಿಗೆ ತರುವುದನ್ನು ಮಾಡಿದ್ದೇವೆ. ಆ ಕಾನೂನಿನಲ್ಲಿ ಅವಕಾಶ ಇರುವುದು ಸಕ್ಕರೆ ಹಂಗಾಮು ಎಂದರೆ ಅಕ್ಟೋಬರ್ 1 ರಿಂದ ಮುಂದಿನ ವರ್ಷ ಮಾರ್ಚ 31 ರವರೆಗೂ ಸಕ್ಕರೆ ವರ್ಷವೆಂದು ಹೇಳಿ ಆ ಕಾನೂನಿನಲ್ಲಿ ಮಾಡಿಕೊಟ್ಟಿದ್ದಾರೆ. ಸಕ್ಕರೆ ವರ್ಷ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಸಭೆಯನ್ನು ಕರೆದು ಕನಿಷ್ಠ ಪಕ್ಷ ಮೂರು ಸಭೆಗಳನ್ನು ಮಾಡಿ ರೈತರು ಮತ್ತು ಕಾರ್ಖಾನೆ ಮಾಲೀಕರ ಸಭೆಯನ್ನು ನಡೆಸಿ ಯೋಗ್ಯವಾದಂತ ಬೆಲೆಯನ್ನು ನಿಗದಿ ಮಾಡಬೇಕಾಗಿತ್ತು. ಆದರೆ ಬಹುಶಃ ನನಗೆ ಏಕೋ ಗೊತ್ತಿಲ್ಲ. ಸರ್ಕಾರವು ಅಧಿಕಾರಕ್ಕೆ ಬರಬೇಕಾದರೆ ಈ ನಾಡಿನ ಜನರ ಆಶೀರ್ವಾದವು ಇದೆ. ಬಹಳಷ್ಟು ನಿರೀಕ್ಷೆಯನ್ನಿಟ್ಟುಕೊಂಡು ಜನರು ಇವರಿಗೆ ಮತವನ್ನು ಕೊಟ್ಟರು. ಆದರೆ ಕನಿಷ್ಠ ಪಕ್ಷ ಒಂದು ಸಭೆಯನ್ನು ಮಾಡುವುದಕ್ಕೆ ಸರ್ಕಾರಕ್ಕೆ ಆಗಲಿಲ್ಲ ಇದೊಂದು ದುರ್ದೈವದ ಸಂಗತಿ. ಸರ್ಕಾರಕ್ಕೆ ಕಿವಿಯೂ ಇಲ್ಲ, ಕಣ್ಣೂ ಇಲ್ಲ, ಬಾಯಿಯೂ ಇಲ್ಲ, ಏಕೆಂದರೆ ರೈತರು ಕಳೆದ ಎರಡೂವರೆ ತಿಂಗಳಿಂದ ಬೀದಿಗಿಳಿದು ಹೋರಾಟವನ್ನು ಮಾಡುತ್ತಿದ್ದಾರೆ. ಎರಡೂವರೆ ತಿಂಗಳಿನಲ್ಲಿ ಸರ್ಕಾರವು ಏನೇನೂ ಮಾಡಲಿಲ್ಲ. ದುರ್ದೈವ ಅಂದರೆ ನಮ್ಮ ಸಕ್ಕರೆ ಮಂತ್ರಿಗಳು ಹೇಳುತ್ತಾರೆ. ನನಗೆ ವಯಸ್ಸಾಗಿದೆಯಪ್ಪಾ ಬಹಳ ಕಾಡಿಸಬೇಡಿ. ನೀವು ನನ್ನನ್ನು ಕಾಡಿಸಿದರೆ ನನಗೆ heart attack ಆದೀತು ಎಂದು ಹೇಳುತ್ತಾರೆ. ಈ ವಿಷಯವು ಪೇಪರ್ ಮತ್ತು ಟಿ.ವಿ.ಯಲ್ಲಿ ಬಂದಿತ್ತು. ಆಗ ನಾನು ಗಾಬರಿಯಾದೆ, ಎಲ್ಲಾದರೂ ಇದು ಆದೀತು ಎಂದು ಮಾನ್ಯ ಸಕ್ಕರೆ ಸಚಿವರೆ, ತಾವು ಆ ನಂತರ ಉತ್ತರವನ್ನು ಕೊಡಿ. ನಾನು ಇನ್ವೊಯೀಲ್ವ್ ಆಗಿರುವುದಿಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಮಾನ್ಯ ಸಕ್ಕರೆ ಸಚಿವರು) :- ಸಕ್ಕರೆ ಕಾಯಿಲೆ ನನಗಿಂತಲೂ ಅವರಿಗಿದೆ.

ಶ್ರೀ ಗೋವಿಂದ ಎಂ ಕಾರಜೋಳ :- ಮಾನ್ಯ ಸಚಿವರು ತಾವು ಕುಳಿತುಕೊಳ್ಳಿ, ಮಾನ್ಯ ಛೇರ್ಮನ್‌ರವರೆ ನಾನು ಇನ್ನೂ ಯೀಲ್ಡ್ ಆಗಿರುವುದಿಲ್ಲ. ಪೇಪರ್‌ನಲ್ಲಿ ಬಂದಿರುವುದನ್ನು ನಾನು ಹೇಳಿದ್ದೇನೆ. ನೀವು ಆರೋಗ್ಯವಂತ ರಾಗಿರುವುದಕ್ಕೆ ನಾನು ಇನ್ನೂ ಸಂತೋಷಪಡುತ್ತೇನೆ. ನೀವು ಇನ್ನೂ ಆರೋಗ್ಯವಂತರಾಗಿರಿ

ಶ್ರೀ ಪ್ರಕಾಶ ಬಿ. ಹುಕ್ಕೇರಿ : ಅವರು ಮಾತನಾಡಿದ ತಕ್ಷಣ ಅದೇನು ನನಗೆ ತಟ್ಟುವುದಿಲ್ಲ. ಸರ್ಕಾರ ಏನು ಮಾಡಿಲ್ಲವೆಂದು ತಾವು ಹೇಳುವುದಕ್ಕೆ ಹೋಗಬೇಡಿ ಈ ರೀತಿ ಹೇಳಿಕೆ ಕೊಡಬೇಡಿ.

ಛೇರ್ಮನ್ : ತಾವು ಉತ್ತರ ಕೊಡುವಾಗ ಈ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಪ್ರಕಾಶ ಬಿ.ಹುಕ್ಕೇರಿ (ಮಾನ್ಯ ಸಕ್ಕರೆ ಸಚಿವರು) :- ಮಾನ್ಯ ಸದಸ್ಯರು ಮಾತನಾಡುವಾಗ ಇನ್ನೂ ಸಭೆ ಆಗಿಲ್ಲ. ಸರ್ಕಾರ ಇನ್ನೂ ಏನನ್ನೂ ಮಾಡಿಲ್ಲವೆನ್ನುವ ರೀತಿಯಲ್ಲಿ ಹೇಳಿಕೆಗಳನ್ನು ಅವರು ಕೊಡಬಾರದು.

ಶ್ರೀ ಗೋವಿಂದ ಎಂ. ಕಾರಜೋಳ: ನೀವು ಮಾಡಿರುವುದನ್ನು ನಾನು ಹೇಳುತ್ತೇನೆ, ಕೇಳಿ.

ಶ್ರೀ ಪ್ರಕಾಶ ಬಿ ಹುಕ್ಕೇರಿ : ಅವರು ಹೇಳಿದ್ದನ್ನೆಲ್ಲಾ ಕೇಳಿಕೊಂಡು ಸುಮ್ಮನೆ ಕುಳಿತುಕೊಳ್ಳಬೇಕೆ? ರೈತರ ಬಗ್ಗೆ ನಾವು ಎಷ್ಟು ಸಭೆಗಳನ್ನು ಮಾಡಿ ದ್ದೇವೆ? ಯಾರ್‍ಯಾರು ಆ ಕಮಿಟಿಯಲ್ಲಿ ಇದ್ದಾರೆ? ಅವರೊಂದಿಗೆ ನಾನು ಐವರು ಬಾರಿ ಫೋನ್ ಮೂಲಕ ಮಾತನಾಡಿದ್ದೇನೆ. ಅವರು ಸುಮ್ಮನೆ ತಪ್ಪು ಹೇಳಿಕೆಯನ್ನು ಕೊಡಬಾರದು ಎಂದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ :- ಅವರು ಉತ್ತರ ಆಮೇಲೆ ಹೇಳಲಿ, ಸಚಿವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಗೋವಿಂದ ಎಂ. ಕಾರಜೋಳ :- ಕನಿಷ್ಟ ಮೂರು ಸಭೆ ಆಗಬೇಕಾಗಿತ್ತು. ಆದರೆ ದುರ್ದೈವ ಸಂಗತಿ ಅವರು ಯಾವ ಸಭೆಯನ್ನು ಮಾಡಲಿಲ್ಲ. ಹೀಗಾಗಿ ರೈತರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ರೈತ ಒಂದು ಟನ್ ಕಬ್ಬು ಬೆಳೆಯಬೇಕಾದರೆ ಇವತ್ತು 2,700 ರೂಪಾಯಿಗಳಷ್ಟು ಖರ್ಚಾಗುತ್ತದೆ. ಸರ್ಕಾರ ಅದಕ್ಕೆ 2,500-00 ರೂಪಾಯಿಗಳನ್ನು ಬೆಲೆ ನಿಗದಿ ಮಾಡಿದೆ. ಒಂದು ಟನ್ ಕಬ್ಬನ್ನು ನುರಿಸಿದರೆ ಸರ್ಕಾರಕ್ಕೆ ಟ್ಯಾಕ್ಸ್ ರೂಪದಲ್ಲಿ 3,200-00 ರೂಪಾಯಿ ಬರುತ್ತದೆ. ಸರ್ಕಾರಕ್ಕೇನಾಗಿದೆ? 3,000-00 ರೂಪಾಯಿಯಲ್ಲಿ 1,000-00 ರೂಪಾಯಿಗಳನ್ನು ಕೊಡಿ, ಈ ಬೆಲೆಯನ್ನು ಏಕೆ ಸರ್ಕಾದವರು ಘೋಷಣೆ ಮಾಡಬಾರದಾಗಿತ್ತು? ರೈತರು ಇವತ್ತು ಸುವರ್ಣಸೌಧದ ಮುಂದೆ ಧರಣಿ ಮಾಡುತ್ತಿದ್ದಾರೆ. ಇವತ್ತು ಕಾರ್ಖಾನೆಗಳವರಿಗೂ ಖರ್ಚುವೆಚ್ಚ ಇವೆ. ಸಕ್ಕರೆ ಉತ್ಪಾದನೆ ಮಾಡಬೇಕಾದರೆ ರೂ.1366-00 ಕೇನ್ ಬಿಲ್ ಅನ್ನು ಕೊಡಬೇಕಾಗುತ್ತದೆ. ಇಷ್ಟಾದರೂ ಒಂದು ಟನ್ ಕಬ್ಬಿಗೆ ಕಾರ್ಖಾನೆಗಳಿಗೆ 4,2070-00 ರೂಪಾಯಿಗಳಷ್ಟು ಉತ್ಪನ್ನ ಬರುತ್ತದೆ. ಸರ್ಕಾರಕ್ಕೆ ಟ್ಯಾಕ್ಸ್ ಬರುತ್ತದೆ, ಇಂಥ ಸಂದರ್ಭದಲ್ಲಿ ಇವರು ಏಕೆ ಕೊಡಲಿಕ್ಕೆ ಹಿಂದುಮುಂದು ನೋಡುತ್ತಿದ್ದಾರೆಯೋ ಗೊತ್ತಿಲ್ಲ. ಕಳೆದ ಹಲವಾರು ವರ್ಷಗಳಿಂದ ಸರಿಯಾಗಿ ಮಳೆಬೆಳೆ ಇಲ್ಲದೆ ಈಲ್ಡ್ ಕಡಿಮೆ ಆಗಿದೆ. 25 ಟನ್, 30 ಟನ್, 35 ಟನ್ ಬೆಳೆಯುತ್ತಾರೆ, ಸರಾಸರಿ ನಮ್ಮ ಭಾಗದಲ್ಲಿ ಇವತ್ತು 35 ಟನ್ ಕಬ್ಬನ್ನು ನಾವು ಬೆಳೆಯುತ್ತಿದ್ದೇವೆ. ನಾವು ಇವತ್ತು ಕೇಳುತ್ತಿರುವುದು ಬಹಳ ಕಡಿಮೆ ಬೆಲೆ. ರೈತರು 3.000/- ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತಿದ್ದಾರೆ. 3000/- ರೂಪಾಯಿ ಬಹಳ ದೊಡ್ಡ ಬೆಲೆ ಅಲ್ಲ. ನಮ್ಮ ಸರ್ಕಾರ ಆದೇಶ ಮಾಡಿದರೆ ಇವತ್ತು ಕಾರ್ಖಾನೆಯವರು ಅವರ್ಯಾರು ಆದೇಶ ಮಾಡಲಿಕ್ಕೆ ಎಂದು ಕೇಳುತ್ತಾರೆ. ಅದಕ್ಕೆ ನಾನು ಸರ್ಕಾರ ಇದೆಯೇ ಇಲ್ಲವೇ ಎಂದು ಕೇಳಿದೆ. ಸಚಿವರು ಆದೇಶ ಮಾಡಿದ ಮೇಲೆ ಅದನ್ನು implement ಮಾಡಬೇಕು. ನಿಮ್ಮ ಆದೇಶವನ್ನು ಧಿಕ್ಕರಿಸಿ ಅವರು ಟನ್‌ಗೆ 2,000-00 ರೂಪಾಯಿಗಳಷ್ಟು ಕೊಡುತ್ತೇವೆಂದು ರೈತರ ಕಡೆಯಿಂದ ಬರೆಸಿಕೊಳ್ಳುತ್ತಿದ್ದಾರೆ. ಸರ್ಕಾರದ ಆದೇಶಕ್ಕೆ ಕವಡೆ ಕಿಮ್ಮತ್ತು ಇಲ್ಲದ ಮೇಲೆ

ಆದೇಶವನ್ನೇಕೆ ಮಾಡಿದಿರಿ? ಸರ್ಕಾರವೆಂದರೇನು? ನಿಮ್ಮ ಆದೇಶವನ್ನು ಅವರು ಕಸದ ಬುಟ್ಟಿಗೆ ಹಾಕಿ ತಮಗೆ ಬೇಕಾದ ಹಾಗೆ ಬೆಲೆ ಬರೆಸಿ ಕೊಳ್ಳುವುದಕ್ಕೆ ಸರ್ಕಾರ ಎನ್ನುವುದಿಲ್ಲ. ಪಂಜಾಬ್‌ನಲ್ಲಿ 2013ರ ಮೇ 31 ರಂದು ಪ್ರಕಾಶ್ ಸಿಂಗ್ ಬಾದಲ್‌ರವರು ಕಬ್ಬು ಬೆಳೆಗಾರರ ಎಸ್.ಎ.ಪಿ ದರ ನಿಗದಿ ಪಡಿಸಲಿಕ್ಕೆ ಸ್ವತಃ ಕುಳಿತು ಸಭೆ ಮಾಡುತ್ತಾರೆ, ಅದರ ಪ್ರತಿಯನ್ನು ತಮಗೆ ಆಮೇಲೆ ಕಳುಹಿಸಿಕೊಡುತ್ತೇನೆ. ಪ್ರತಿ ಟನ್ ಕಬ್ಬಿಗೆ 2,900–00 ರೂಪಾಯಿ ಬೆಲೆ ನಿಗದಿ ಮಾಡುತ್ತಾರೆ. ನಿಮಗೇನಾಗಿದೆ? ಇದು ಮೀನು ಮಾರುಕಟ್ಟೆ ಅಲ್ಲ. ರೈತರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಗಂಭೀರವಾಗಿ ಯಾರಾದರೂ ವಿರೋಧ ಮಾಡುವುದಿದ್ದರೆ ಎದ್ದು ನಿಂತು ಮಾತನಾಡಲಿ. ಇದು ಫಿಶ್ ಮಾರ್ಕೆಟ್ ಅಲ್ಲ, ರೈತರಿಗೆ ಕೊಡಬಾರದು ಎಂದು ರೈತರ ವಿರುದ್ಧ ಹೇಳುವವರು ಹೇಳಲಿ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ದಯಮಾಡಿ ನಾನು ತಮ್ಮಲ್ಲಿ ಅತ್ಯಂತ ವಿನಯದಿಂದ ಕೈಮುಗಿದು ಕೇಳಿಕೊಳ್ಳುತ್ತೇನೆ. ಹೊರಗಡೆ 50000 ಜನ ರೈತರು ಧರಣಿ ಮಾಡುತ್ತಿದ್ದಾರೆ, ಬಹುಶಃ ಒಂದು ಗಂಟೆಯೊಳಗೆ ಲಾಠಿ ಚಾರ್ಜ್ ಆದರೂ ಆಗಬಹುದು. ರೈತರು ಆಕ್ರೋಶ ಗೊಂಡಿದ್ದಾರೆ, ನಮ್ಮ ಅಳಲನ್ನು ಕೇಳುತ್ತಿಲ್ಲವೆಂಬ ಭಾವನೆ ಅವರಲ್ಲಿ ಮೂಡಿದೆ. ಅದಕ್ಕೆ ನಾನು ಎಲ್ಲಾ ಸದಸ್ಯರಲ್ಲಿ ವಿನಂತಿಸುತ್ತೇನೆ. ಇದನ್ನು ಹಗುರವಾಗಿ ತೆಗೆದುಕೊಳ್ಳಬೇಡಿ. ಪಾರ್ಟಿ, ಪಂಗಡ ಎಂದು ತೆಗೆದುಕೊಳ್ಳಬೇಡಿ, ಇಡೀ ರಾಜ್ಯದ ಕಬ್ಬು ಬೆಳೆಗಾರರ ಬಗ್ಗೆ ನಡೆಸಿರುವ ಚಿಂತನೆಯಲ್ಲಿ ತಾವೆಲ್ಲರೂ ಭಾಗವಹಿಸಿ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ಪೂರಕವಾಗಿ ಚರ್ಚೆ ಮಾಡಲಿಕ್ಕೆ ಎಲ್ಲರೂ ಸಿದ್ಧರಿದ್ದೇವೆ, ಆದರೆ ಒಂದು ಮಾತು, ನೀವು ಮಾತ್ರ ಅವರ ವಾರಸುದಾರರು, ನಾವು ಅವರ ವಿರೋಧಿಗಳು ಎನ್ನುವ ಮಾತು ಇತ್ತಲ್ಲ ಅದನ್ನು ಕಡತದಿಂದ ಮೊದಲು ತೆಗೆದುಹಾಕಲಿ.

(ಗೊಂದಲ)

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ : ರೈತರ ಬಗ್ಗೆ ನಮಗೂ ಕಳಕಳಿ ಇದೆ.

(ಗೊಂದಲ)

ಉಪಾಧ್ಯಕ್ಷರು :- ನೀವು ಮಾತನಾಡಿ.

ಶ್ರೀ ಗೋವಿಂದ ಎಂ.ಕಾರಜೋಳ :- ಈ ಸಂಸ್ಕೃತಿ ಒಳ್ಳೆಯದಲ್ಲ, ರೈತರ ಬಗ್ಗೆ ಸೌಜನ್ಯತೆ ಇರಲಾರದವರು ಇವರ ಮುಂದೆ ಏನು ಮಾತನಾಡುವುದು? ಇಲ್ಲದೆ ಹೋದರೆ ನೀವು ಏನು ಬರೆದುಕೊಡುತ್ತೀರೋ ಕೊಡಿ ಅದನ್ನೇ ಓದುತ್ತೇನೆ. ಬರೆದುಕಳುಹಿಸಿ ಕೊಡಿ, ಬಹಳ ಬುದ್ಧಿವಂತರಿದ್ದೀರಿ ಮಾನ್ಯ ಉಪಾಧ್ಯಕ್ಷರೆ, ತಮಗೆ ನನ್ನ ಮಾತನ್ನು ಮುಗಿಸಿದ ಮೇಲೆ ಪ್ರಕಾಶ್ ಸಿಂಗ್ ಬಾದಲ್‌ರವರ ಫೋಟೋ ಇದೆ, ಎಸ್.ಎ.ಪಿ ದರ ಜಾರಿ ಮಾಡಿರುವ ಆದೇಶ ಇದೆ, ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಪ್ರತಿ ಟನ್ ಕಬ್ಬಿಗೆ 2900-00 ರೂಪಾಯಿಗಳನ್ನು ಬೆಲೆ ನಿಗದಿ ಮಾಡಿದ್ದಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದೆ.

ಶ್ರೀ ಸಿದ್ದು ಬಿ.ರಾಮಗೌಡ : ಸಕ್ಕರೆ ದರ ಎಕ್ಸ್ ಫ್ಯಾಕ್ಟರಿಯೋ ಅಥವಾ ಎಕ್ಸ್ ಫೀಲ್ಡೋ? ಯಾವ ದರವಿದೆ ಹೇಳಿ? ರೂ.2900-00 ಫ್ಯಾಕ್ಟರಿಯಿಂದ ಕೊಡಬೇಕೋ ಅಥವಾ ರೂ.2900-00 ಫೀಲ್ಡ್‌ನಿಂದ ತರಬೇಕೋ? ದಯ ಮಾಡಿ ಹೇಳಿ

ಶ್ರೀ ಗೋವಿಂದ ಎಂ.ಕಾರಜೋಳ : ಎರಡೂ ದರಗಳ ಬಗ್ಗೆ ಹೇಳುತ್ತೇನೆ. ಈ ಪ್ರೆಸ್ ನೋಟ್‌ನಲ್ಲಿ ಎಕ್ಸ್ ಫೀಲ್ಡ್ ಅಥವ ಎಕ್ಸ್ ಫ್ಯಾಕ್ಟರಿ ಎಂದು ಬರೆದಿಲ್ಲ. ಪಂಜಾಬ್ ನಲ್ಲಿ ಎಕ್ಸ್ ಫ್ಯಾಕ್ಟರಿ ಇಲ್ಲ. ಅಲ್ಲಿ ರೂಢಿ ಇರುವಂಥದ್ದು ಎಕ್ಸ್ ಫೀಲ್ಡ್ ದರ. ಕೇಂದ್ರದಲ್ಲಿ ಇವತ್ತು ಕಾಂಗ್ರೆಸ್ ಸರ್ಕಾರವಿದೆ, ನಮ್ಮಲ್ಲಿ ಕಳೆದ ವರ್ಷದಲ್ಲಿ 80 ಲಕ್ಷ ಟನ್ ಸಕ್ಕರೆ ಸರ್‌ಪ್ಲಸ್ ಇದೆ, ಈ ವರ್ಷ 2013-14ನೇ ಸಾಲಿನಲ್ಲಿ 250 ಲಕ್ಷ ಟನ್ ಉತ್ಪಾದನೆ ಆಗುವ ಸಾಧ್ಯತೆ ಇದೆ. Domestic consumption 190 ಲಕ್ಷ ಟನ್ ನಾವು ಪಡೆಯುತ್ತಿದ್ದೇವೆ. ಈ ವರ್ಷದ್ದು 60 ಲಕ್ಷ ಟನ್, ಹೋದ ವರ್ಷದ್ದು 80 ಲಕ್ಷ ಟನ್ ಉಳಿಯುತ್ತದೆ,

140 ಲಕ್ಷ ಟನ್ ಸಕ್ಕರೆ ದೇಶದಲ್ಲಿ ಗೋಡೌನ್‌ಗಳಲ್ಲಿ ಉಳಿಯುತ್ತದೆ, ಹೀಗಾದರೆ ಸಕ್ಕರೆ ಕಾರ್ಖಾನೆಗಳು ಹೇಗೆ ಬದುಕಬೇಕು? ಸರ್ಕಾರಕ್ಕೆ ಒಂದು ನೀತಿ ನಿಯಮ ಏನೂ ಇಲ್ಲವೇನು? ನಮಗೆ ಹೆಚ್ಚಾದಾಗ, ಕಡಿಮೆಯಾದಾಗ ಎಕ್ಸ್‌ಪೋರ್ಟ್, ಇಂಪೋರ್ಟ್ ಮಾಡಲಾಗುತ್ತದೆ.

ನಮಗೆ ಕಡಿಮೆ ಇದ್ದಾಗ ಬೇಕಾದರೆ ಬೇರೆ ದೇಶದಿಂದ ತರಿಸಲಿ ಆದರೆ, ಕಡಿಮೆ ಇದ್ದಾಗ ಬೇರೆ ದೇಶದಿಂದ ತರಿಸಲ್ಲಿಲ್ಲ. ಯಾರಿಗೋ ಉಪ ಕಾರ ಮಾಡುವುದಕ್ಕಾಗಿ ತರಿಸಿದರು. ಯಾರಿಗೋ Indirect ಆಗಿ ಸಹಾಯ ಮಾಡುವುದಕ್ಕೆ ತರಿಸಿದರು ರಾ ಶುಗರ್‌ನ್ನು ತರಿಸಿ ಇಲ್ಲಿ process ಮಾಡಿ ಕ್ರಿಸ್ಟಲ್ ಶುಗರ್ ಮಾಡಿದರು. ಹಾಗಾಗಿ ಇವತ್ತು ದೇಶದಲ್ಲಿ ಸಕ್ಕರೆ ಉಳಿಯು ತ್ತಿದೆ. ಕಾರ್ಖಾನೆಗಳು ಸಂಕಷ್ಟದಲ್ಲಿ ಇವೆ. ಬೆವರು ಸುರುಸಿ ಬೆಳೆದಂಥ ರೈತರ ಕಣ್ಣಿನಲ್ಲಿ ಕಣ್ಣೀರಿನ ಜೊತೆಗೆ ರಕ್ತ ಬರುತ್ತಿದೆ. ಈ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆ ಬೇರೆ ದೇಶದಿಂದ ಸಕ್ಕರೆಯನ್ನು ತರಿಸಿದರು ಎಂಬ ಬಗ್ಗೆ ಯಾರೂ ಹೇಳುತ್ತಿಲ್ಲ ಕಾರ್ಖಾನೆಯನ್ನು ಮುಚ್ಚಬೇಕು ಎನ್ನುವವರು ನಾವಲ್ಲ. ಕಾರ್ಖಾನೆ ಉಳಿದರೆ ಮಾತ್ರ ನಮ್ಮ ರೈತ ಬದುಕುತ್ತಾನೆ. ಇವತ್ತು ದೇಶದಲ್ಲಿ ರೈತನ ಪ್ರಥಮ ವಾಣಿಜ್ಯ ಬೆಳೆ ಇರತಕ್ಕದ್ದೇ ಕಬ್ಬು. ಇವತ್ತಿನ ದಿವಸ ಗೊಬ್ಬರದ ಬೆಲೆ ಕಳೆದ ವರ್ಷಕ್ಕಿಂತ ಎರಡು ಪಟ್ಟು ಜಾಸ್ತಿಯಾಗಿದೆ. ಗೊಬ್ಬರ ಕೂಲಿ ಎರಡು ಪಟ್ಟು ಜಾಸ್ತಿಯಾಗಿದೆ, ವಿದ್ಯುತ್ ಇಲ್ಲ, ನೀರಿಲ್ಲ. ಇಂಥ ಸಂದರ್ಭದಲ್ಲಿ ರೈತ ಕಷ್ಟಪಟ್ಟು ಕಬ್ಬು ಬೆಳೆಯುತ್ತಾನೆ. ಈ ಸರ್ಕಾರ ರೈತರ ನೆರವಿಗೆ ಬಾರದೇ ಬೇರೆ ಯಾರ ನೆರವಿಗೆ ಬರುತ್ತದೆ.?

(ಗೊಂದಲ)

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಸಕ್ಕರೆ ಸಚಿವರು) :- ಹೋದವರ್ಷ ಸಕ್ಕರೆ ದರ ಸರಾಸರಿ ರೂ. 29/- ರಿಂದ ರೂ. 30/- ಇತ್ತು. ಆಗ ತಾವು ಏಕೆ ಕಬ್ಬಿಗೆ ರೂ.2500/- ಮಾಡಲಿಲ್ಲ? ರೈತರ ಬಗ್ಗೆ ಅಂದಿನ ಸರ್ಕಾರಕ್ಕೆ ಕಾಳಜಿ ಇರಲಿಲ್ಲವೇ? ಇವತ್ತು ಸಕ್ಕರೆ ದರ ರೂ.25 ಇದೆ ಆದರೂನಾವು ಕಬ್ಬಿಗೆ ರೂ. 2500/- ಕೊಡುತ್ತಿದ್ದೇವೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ :- ತಾವು ದಯಮಾಡಿ ಕುಳಿತು ಕೊಳ್ಳಿ. ನಾನು ಮಾತನಾಡುತ್ತಿದ್ದೇನೆ. ತಾವು ಉತ್ತರ ಕೊಡುವ ಸಂದರ್ಭದಲ್ಲಿ ಕೊಡಿ.

ಯೋಗ್ಯ ಬೆಲೆ ಸಕ್ಕರೆ ಇದ್ದರೆ ಮಾತ್ರ ರೈತ ಬದುಕುತ್ತಾನೆ.

(ಗೊಂದಲ)

ಶ್ರೀ ಪ್ರಕಾಶ್ ಬಿ.ಹುಕ್ಕೇರಿ : ನಾವು ಕುಳಿತುಕೊಳ್ಳುವುದಕ್ಕೆ ಬಂದಿಲ್ಲ, ಮಾತನಾಡುವುದಕ್ಕೆ ಬಂದಿದ್ದೇವೆ. ನಿಮ್ಮಿಂದ ನಾವು ಕಲಿಯಬೇಕಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಬಾಬಣ್ಣ ಹುಕ್ಕೇರಿಯವರೆ ಅವರು ಯೀಲ್ಡ್ ಆಗಿಲ್ಲ. ದಯಮಾಡಿ ಕುಳಿತುಕೊಳ್ಳಿ, ಆಮೇಲೆ ಮಾತನಾಡಿ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ :- ತಾವು ಜವಾಬ್ದಾರಿ ಮಂತ್ರಿಯಾಗಿ, ಹಿರಿಯ ನಾಯಕರಾಗಿ ಕೆಲಸ ಮಾಡುತ್ತಿದ್ದೀರಿ, ತಾವು ಜವಾಬ್ದಾರಿಯಾಗಿ ಮಾತನಾಡ ಬೇಕು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ :- ನಾವೂ ಜವಾಬ್ದಾರಿಯಾಗಿ ಮಾತನಾಡು ತ್ತಿದ್ದೇನೆ. ನೀವೂ ಜವಾಬ್ದಾರಿಯಾಗಿ ಮಾತನಾಡಬೇಕು.

(ಗೊಂದಲ)

ಉಪಾಧ್ಯಕ್ಷರು :- ತಾವುವಾದಕ್ಕೆ ಇಳಿಯಬೇಡಿ.

ಶ್ರೀ ಗೋವಿಂದ ಎಂ.ಕಾರಜೋಳ : ಅಧ್ಯಕ್ಷರೆ, ಅವರಿಗೆ ಕೇಳುವ ಸೌಜನ್ಯತೆ ಇಟ್ಟುಕೊಳ್ಳಲು ಹೇಳಿ.

ಉಪಾಧ್ಯಕ್ಷರು – ಮಾನ್ಯ ಗೋವಿಂದ ಕಾರಜೋಳರವರೇ, ತಾವು ನನ್ನನ್ನು ನೋಡಿ ಮಾತನಾಡಿ

ಶ್ರೀ ಗೋವಿಂದ ಎಂ.ಕಾರಜೋಳ :– ಅಧ್ಯಕ್ಷರೆ, ನಾನು ನಿಮ್ಮನ್ನೇ ನೋಡಿ ಮಾತನಾಡುತ್ತಿದ್ದೇನೆ. ಅವರ ಕಡೆ ನಾನು ನೋಡಿಲ್ಲ. ನಾನು ಹೇಳು ವುದು ಏನೆಂದರೆ, ಕೇಂದ್ರ ಸರ್ಕಾರದ ತಪ್ಪು ನೀತಿಯಿಂದ, ಸರ್ ಪ್ಲಸ್ ಆಗಿದೆ.

(ಗೊಂದಲ)

ಉಪಾಧ್ಯಕ್ಷರು : ತಾವು Controversy ಮಾಡುವುದಕ್ಕೆ ಹೋಗಬೇಡಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು Controversy ಏನು ಮಾಡಿಲ್ಲ. ಕೇಂದ್ರ ಸರ್ಕಾರದ ತಪ್ಪು ನೀತಿಯಿಂದ ನಮ್ಮಲ್ಲೇ sugar surplus ಇದ್ದಾಗಲೂ ಆಮದು ಮಾಡಿಕೊಳ್ಳುವಂಥ ಅವಶ್ಯಕತೆ ಇರಲಿಲ್ಲ. ಇವತ್ತು ಕಬ್ಬು ಬೆಳೆಯುವಂಥ ದೇಶದ ರೈತ ಸಂಕಷ್ಟಕ್ಕೆ ಸಿಲುಕಿರುವುದಕ್ಕೆ ಕಾರಣ ಕೇಂದ್ರ ಸರ್ಕಾರದ ತಪ್ಪು ನೀತಿಯಾಗಿದೆ.

(ಗೊಂದಲ)

ಉಪಾಧ್ಯಕ್ಷರು .– ಮಾನ್ಯ ಸದಸ್ಯರೆ, ಅರ್ಧ ಮಾಡಿಕೊಳ್ಳಿ, ಉಳಿದ ಸದಸ್ಯರು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಗೋವಿಂದ ಎಂ, ಕಾರಜೋಳ :– ಮಾತನಾಡುವುದಕ್ಕೆ ಅವಕಾಶ ವಿಲ್ಲವೆಂದರೆ ಹೇಗೆ? ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಎರಡೂ ಸರ್ಕಾರ ಗಳು ತಪ್ಪು ಮಾಡಿದೆ.

(ಗೊಂದಲ)

ಉಪಾಧ್ಯಕ್ಷರು .– ಹಿಂದಿನ ಸಾಲಿನಲ್ಲಿರುವ ಸದಸ್ಯರು ಗದ್ದಲ, ಮಾಡ ಬೇಡಿ.

ಶ್ರೀ ಗೋವಿಂದ ಎಂ ಕಾರಜೋಳ :- ಮಾನ್ಯ ಹುಕ್ಕೇರಿಯವರು ಬೇಸರ ಮಾಡಿಕೊಂಡರೆ ಹೇಗೆ? ವಿರೋಧ ಪಕ್ಷದವರು ಹೊಗಳುವುದನ್ನು, ಕೂಗುವುದನ್ನು ಆನಂದದಿಂದ ಕುಳಿತು ಕೇಳಬೇಕು! ತಾವು ಸರ್ಕಾರ ನಡೆಸುತ್ತಿದ್ದೀರಿ. ಸರಿಯಾಗಿ ಅದನ್ನು ನಿರ್ವಹಣೆ ಮಾಡುವುದಕ್ಕೆ ಸಾಧ್ಯವಿದೆ. ಸಮಸ್ಯೆ ಪರಿಹಾರ ಮಾಡಲಿಕ್ಕೆ ಸಾಧ್ಯವಿದೆ. ಅದರ ಬಗ್ಗೆ ಆಲೋಚನೆ ಚಿಂತನೆ ಮಾಡಬೇಕು.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ :- ಇದು ಪದ್ಧತಿ ಅಲ್ಲ ಇದು ನಡ ವಳಿಕೆ ಅಲ್ಲ, ಸರ್ಕಾರ ನಡೆಸುವವರಿಗೆ ಕನಿಷ್ಠ ಸೌಜನ್ಯತೆ ಇರಬೇಕಾಗುತ್ತದೆ ವಿರೋಧ ಪಕ್ಷದವರು ಹೇಳಿದ್ದನ್ನು ಕೇಳಬೇಕಾಗುತ್ತದೆ. ಜನರ ಸಮಸ್ಯೆಯ ಬಗ್ಗೆ ಕೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವು ದೇನೆಂದರೆ, ಕೇಂದ್ರ ಸರ್ಕಾರದ ತಪ್ಪು ನೀತಿಯಿಂದ ಇವತ್ತಿನ ದಿವಸ ರೈತ ಸಂಕಷ್ಟದಲ್ಲಿದ್ದಾನೆ.

ಉಪಾಧ್ಯಕ್ಷರು .- ಸ್ವಲ್ಪ ತಾಳ್ಮೆ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ :- ಅಧ್ಯಕ್ಷರೆ, ತಮಗೆ ಅಡ್ಡಿಪಡಿಸುವುದಿಲ್ಲ. ತಮಾಷೆಗೆ ಒಂದು ವಿಚಾರ ಹೇಳುತ್ತೇನೆ. ಮಾನ್ಯ ಉಮೇಶ್ ಕತ್ತಿಯವರು ಕಾರ್ಖಾನೆ ಪರ ಕತ್ತಿ ವರಸೆ ಆಡುತ್ತಿದ್ದಾರಾ? ಅಥವಾ ರೈತರ ಪರವಾಗಿ ಕತ್ತಿ ವರಸೆ ಆಡುತ್ತಿದ್ದಾರಾ? ಎಂದು ದಯಮಾಡಿ ತಿಳಿಸಬೇಕು.

ಶ್ರೀ ಉಮೇಶ್ ವಿ.ಕತ್ತಿ :- ನಾನು ಕಬ್ಬು ಬಾಳೆಗಾರನೂ ಹೌದು, ಕಬ್ಬು ಕಾರ್ಖಾನೆ ಓನರ್‌ರೂ ಹೌದು, ಡಿಸ್ಟಿಲರಿ ಓನರ್‌ರೂ ಹೌದು ಮತ್ತೆ ರೈತರ ಪರ ಹೋರಾಟಗಾರನೂ ಹೌದು.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ :- ಅದೇ ವಿಚಾರದಲ್ಲಿ ನಮ್ಮ ಅನುಮಾನಗಳಿವೆ.

ಶ್ರೀ ಉಮೇಶ್ ವಿ ಕತ್ತಿ :- ಮೂರು ಸಾವಿರ ರೂಪಾಯಿ ಒಂದು ಟನ್‌ಗೆ ಘೋಷಣೆ ಮಾಡಿ ಅದನ್ನು ಅರ್ಧ ಮಾಡಿಕೊಂಡು ಮಾತನಾಡಿದರೆ ಯಾರುಗೂ ತೊಂದರೆಯಿಲ್ಲ. ಒಂದು ಸಾವಿರ ರೂ. ಘೋಷಣೆ ಮಾಡಿ ಸ್ವಾಮಿ. ಒಂದು ಟನ್ ಕಬ್ಬಿನಿಂದ 40 ಕಿಲೋ molasses ಬರುತ್ತದೆ.

(ಗೊಂದಲ)

ಶ್ರೀ ಪಿ.ಎಂ ನರೇಂದ್ರ ಸ್ವಾಮಿ :- 6 ತಿಂಗಳ ಹಿಂದೆ ನೀವೇ ಅಧಿಕಾರದಲ್ಲಿದ್ದಿರಿ

ಶ್ರೀ ಎಂ.ಟಿ.ಬಿ.ನಾಗರಾಜ್ :- 5 ವರ್ಷ ಇವರು ಏಕೆ ಮಾಡಲಿಲ್ಲ? ನೀವು ಏನು ಮಾಡಿದ್ದೀರಾ? ನಿಮಗೆ ರೈತರ ಬಗ್ಗೆ ಮಾತನಾಡುವ ಹಕ್ಕಿಲ್ಲ.

ಶ್ರೀ ಕೆ.ಅಭಯಚಂದ್ರ : ರೈತರ ಬಗ್ಗೆ ಕಾಳಜಿ ಇದೆ ಎಂದು ಮಾತ ನಾಡುತ್ತೀರಿ, 5 ವರ್ಷ ನೀವು ಅಧಿಕಾರದಲ್ಲಿದ್ದಿರಲ್ಲ, ಆಗ ನೀವೇಕೆ ಮಾಡ ಲಿಲ್ಲ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಉಪಾಧ್ಯಕ್ಷರೆ, ರೈತರು ಹೋರಾ ಟಕ್ಕೆ ಇಳಿದಿದ್ದಾರೆ. ಸರ್ಕಾರಕ್ಕೂ ಏನು ವಿಶ್ವಾಸವಿಲ್ಲ, ಜವಾಬ್ದಾರಿ ಇಲ್ಲ, debate ನಲ್ಲಿಇವರು participate ಮಾಡಲಿ. ಈ ರೀತಿ ತೊಂದರೆ ಮಾಡುವುದು ಸರಿಯಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ರೈತರ ಪರವಾಗಿ ಮಾತನಾಡುವುದು ಇವರಿಗೆ ಬೇಕಾಗಿಲ್ಲ, ಅಲ್ಲಿ ರೈತರು ಹೋರಾಟಕ್ಕೆ ಕುಳಿತಿದ್ದಾರೆ, ಅಲ್ಲಿ ಗಂಭೀರ ವಾದ ವಿಚಾರ ಚರ್ಚೆಯಾಗುತ್ತಿದೆ. ಈ ರೀತಿ ತೊಂದರೆ ಮಾಡುವುದು ಸರಿ ಯಲ್ಲ. ಇವರು ಮಾತನಾಡುವುದು ಬೇಡ ಎಂದರೆ ಹೇಗೆ? ರೈತರ ಪರವಾಗಿ ಮಾತನಾಡುವುದಕ್ಕೆ ಇವರು ತಯಾರಿಲ್ಲ. ಇವರೆಲ್ಲ ರೈತರ ವಿರೋಧಿ ಯಾಗಿದ್ದಾರೆ. ಕಬ್ಬು ಬೆಳೆಗಾರರು ಅಲ್ಲಿ ಧರಣಿ ಕುಳಿತಿದ್ದಾರೆ, ಸತ್ಯಾಗ್ರಹ

ನಡೆಸುತ್ತಿದ್ದಾರೆ. ಕಟ್ಟುನಿಟ್ಟಿನ ಕ್ರಮ ಆಗಬೇಕಾಗಿದೆ, ಈ ರೀತಿ ಪದೇ ಪದೇ ತೊಂದರೆ ಮಾಡುವುದು ಸರಿಯಲ್ಲ. ಅವರಿಗೆ interest ಇದ್ದಂತೆ ಕಾಣುತ್ತಿಲ್ಲ ಬೇಡ ಎನ್ನುವವರು ಎದ್ದು ಹೊರಗಡೆ ಹೋಗಲಿ.

ಶ್ರೀ ಬಿ.ರಮಾನಾಥ ರೈ :- ಈಗ ಮೊಸಳೆ ಕಣ್ಣೀರು ಹಾಕುತ್ತಿದ್ದೀರಾ ನೀವು, 5 ವರ್ಷದಿಂದ ನೀವು ಏಕೆ ಮಾಡಲಿಲ್ಲ?

(ಗೊಂದಲ)

ಉಪಾಧ್ಯಕ್ಷರು :- ಸದಸ್ಯರು ಅರ್ಥ ಮಾಡಿಕೊಳ್ಳಬೇಕು ಈ ರೀತಿ ಗದ್ದಲ ಮಾಡಿದರೆ ಹೇಗೆ? ಸದನ ನಡೆಸುವುದು ಹೇಗೆ?

ಶ್ರೀ ಗೋವಿಂದ ಎಂ.ಕಾರಜೋಳ : ಸನ್ಮಾನ್ಯ ಉಪಾಧ್ಯಕ್ಷರೆ, ಬೇರೆ ವಿಷಯ ಇದ್ದರೆ ಗದ್ದಮ ಮಾಡಲಿ, ಇದು ಬೇರೆ ವಿಷಯ ಅಲ್ಲ ರೈತರ ವಿಷಯ. ಅವರೂ ರೈತರಾಗಿದ್ದಾರೆ. ನಾವೂ ರೈತರಾಗಿದ್ದೇವೆ, ಸಮಸ್ಯೆಯಿದೆ.

ಶ್ರೀ ಗೋವಿಂದ ಎಂ.ಕಾರಜೋಳ : ಈಗ ಮುಖ್ಯಮಂತ್ರಿಯವರು ಹೇಳಿದ್ದಾರೆ, ನೀವು ದಯಮಾಡಿ ಸುಮ್ಮನೆ ಇರಿ. ನೀವೇನೂ ಕಾಳಜಿ ಮಾಡ ಬೇಡಿ. ಕೈ ಮುಗಿಯುತ್ತೇನೆ, ಸರ್, ಮುಂದಿನ expansion ನಲ್ಲಿ ಅವರೆಲ್ಲರನ್ನೂ ಮಂತ್ರಿಗಳನ್ನಾಗಿ ಮಾಡಿ.

(ಗೊಂದಲ)

ಉಪಾಧ್ಯಕ್ಷರು .- ನೀವು ಮುಂದುವರೆಸಿ.

ಶ್ರೀ ಗೋವಿಂದ ಎಂ,ಕಾರಜೋಳ :- ಸನ್ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದ ತಪ್ಪು ನೀತಿಯಿಂದಾಗಿ ಇವತ್ತು ಸಕ್ಕರೆ ಉದ್ದಿಮೆಯೂ ಸಂಕಷ್ಟಕ್ಕೀಡಾಗಿದೆ, ದೇಶದಲ್ಲಿ ಕಬ್ಬು ಬೆಳೆಯುವ ರೈತರೂ ಸಹ ಸಂಕಷ್ಟಕ್ಕೀಡಾಗಿದ್ದಾರೆ, ಇವತ್ತು ರೈತರು ಸಾವಿರ ಸಾವಿರ ಸಂಖ್ಯೆಯಲ್ಲಿ ಅಲ್ಲಲ್ಲಿ ಧರಣಿ ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಅಡಿಕೆ ಬೆಳೆಗಾರ, ತೊಗರಿ ಬೆಳೆಯುವವರು ಯಾವ ರೀತಿ ಸಂಕಷ್ಟದಲ್ಲಿದ್ದಾಗ ಅವರ

ನೆರವಿಗೆ ಸರ್ಕಾರ ಬಂದಿತ್ತೋ, ಅದೇ ರೀತಿ ಕಬ್ಬು ಬೆಳೆಗಾರರ ಸಂಕಷ್ಟಕ್ಕೂ ಸರ್ಕಾರ ನೆರವಿಗೆ ಬರಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೇ, ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ, ಹೊರಗಿನ ದೇಶದಿಂದ ಸಕ್ಕರೆ ತರುವುದನ್ನು ಇವತ್ತಿನಿಂದ ನಿಲ್ಲಿಸು ವುದಕ್ಕೆ ಪ್ರಯತ್ನ ಮಾಡಬೇಕೆಂದು ರಾಜ್ಯ ಸರ್ಕಾರಕ್ಕೂ ಸಹ ನಾನು ವಿನಂತಿ ಮಾಡುತ್ತೇನೆ. ಏಕೆಂದರೆ ಕೇಂದ್ರದಲ್ಲೂ ಇವರದ್ದೇ ಸರ್ಕಾರವಿದೆ, ಆಮದನ್ನು ನಿಲ್ಲಿಸಿದರೆ ಖಂಡಿತವಾಗಿಯೂ ಸ್ವಲ್ಪಮಟ್ಟಿಗೆ ಸಹಾಯವಾಗುತ್ತದೆ. ಈ ವರ್ಷ ದೇಶದಲ್ಲಿ 250 ಲಕ್ಷ ಟನ್ ಸಕ್ಕರೆ ಉತ್ಪಾದನೆ ಮಾಡುತ್ತಿದ್ದೇವೆ, ಕಳೆದ ವರ್ಷದ 80 ಲಕ್ಷ ಟನ್ surplus ಇದೆ. 330 ಲಕ್ಷ ಟನ್ ಸಕ್ಕರೆ ಈ ದೇಶಕ್ಕೆ ಉಪಯೋಗವಾಗಬೇಕಾದರೆ ಕನಿಷ್ಠ ಎರಡು ವರ್ಷ ಹಿಡಿಯುತ್ತದೆ. ಎರಡು ವರ್ಷಕಾರ್ಖಾನೆಗಳನ್ನು ಮುಚ್ಚಬೇಕೋ ಅಥವಾ ಎರಡು ವರ್ಷ ರೈತರು ಕಬ್ಬು ಬೆಳೆಯುವುದನ್ನು ಬಿಡಬೇಕೋ? ಇದನ್ನು ನಾವು ಅರ್ಥ ಮಾಡಿಕೊಳ್ಳ ಬೇಕಾಗುತ್ತದೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಹೆಚ್ಚು ಸಮಯ ತೆಗೆದು ಕೊಳ್ಳುವುದಿಲ್ಲ. ಪಾಪ, ಯಾರ್‍ಯಾರು ರೈತರ ಬಗ್ಗೆ ಕಳಕಳಿಯಿಂದ ಆ ಮೂಲೆ ಯಲ್ಲಿದ್ದವರೆಲ್ಲರೂ ಮಾತನಾಡಲಿ. ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಸರ್ಕಾರ ಕೂಡಲೇ ಈ ಸಮಸ್ಯೆಗೆ ಪರಿಹಾರ ಹುಡುಕಿ ರೈತರನ್ನು, ರೋಡ್ ಮೇಲೆ ಧರಣಿ ಮಾಡುವವರನ್ನು ಮನೆಗೆ ಕಳುಹಿಸಬೇಕು. ಕಬ್ಬನ್ನು ಕಾರ್ಖಾನೆ ಗಳಲ್ಲಿ ನುರುಸಲಿಕ್ಕೆ ಅನುಮತಿ ಮಾಡಿಕೊಡಬೇಕು. ಪ್ರತಿಯೊಂದು ಕಾರ್ಖಾನೆ ಯವರಿಗೂ ಸರ್ಕಾರ ಹೇಳಬೇಕು. ನೀವು ಕಬ್ಬು ತೆಗೆದುಕೊಳ್ಳಬೇಕು, ಸರ್ಕಾ ರದ ಆದೇಶ ಪಾಲಿಸಬೇಕು, ಸರ್ಕಾರ ನಿಮಗಾಗಿ ಸಕಲ ಸವಲತ್ತುಗಳನ್ನು ಮಾಡಿಕೊಟ್ಟಿದೆ. ಇವತ್ತು ಕಾರ್ಖಾನೆಗಳು ಬರಬೇಕಾದರೆ ಹಾಗೇ ಬಂದಿಲ್ಲ, ಸರ್ಕಾರದ ನೆರವಿನಿಂದ ಬಂದಿದೆ. ಅದಕ್ಕಾಗಿ ಸರ್ಕಾರ ಅವರ ಮೇಲೆ ಬಿಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ, ಕೂಡಲೇ ಹಂಗಾಮನ್ನು ಪ್ರಾರಂಭವಾಗುವಂತೆ ಮಾಡಿ ಕಬ್ಬು ಉಳಿಯದಂತೆ ಮಾಡ ಬೇಕು ಏಕೆಂದರೆ ಕಬ್ಬು ನುರಿಸುವುದಕ್ಕೆ ಈಗಾಗಲೇ ಒಂದೂವರೆ ತಿಂಗಳು

ವಿಳಂಬವಾಗಿದೆ. ಇದರಿಂದ ರಾಜ್ಯದಲ್ಲಿ ಸುಮಾರು 30-35 ಲಕ್ಷ ಟನ್ ಕಬ್ಬು ನುರಿಸಬೇಕಾಗಿತ್ತು, ಆದರೆ ನುರಿಸುವುದಕ್ಕೆ ಆಗಿಲ್ಲ. ಏಕೆಂದರೆ ಕಾರ್ಖಾನೆಯವರು ಮೊಂಡುತನ ಮಾಡಿ ಕಾರ್ಖಾನೆ ಪ್ರಾರಂಭ ಮಾಡಲಿಲ್ಲ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿ ಮಾಡುತ್ತೇನೆ, ಕೂಡಲೇ ಕಾರ್ಖಾನೆಯವರನ್ನು ಹಾಗೂ ರೈತರನ್ನು ಕರೆದು ಈ ಸಮಸ್ಯೆಗೆ ಪರಿಹಾರ ಮಾಡಬೇಕು. ಬೆಳಗಾವಿಯಲ್ಲಿ ಅಧಿವೇಶನ ಮುಗಿರಯತ್ತದರೊಳಗಾಗಿ ಒಂದು final decisionಗೆ ಬರಬೇಕು. ನಿರ್ದಿಷ್ಟವಾದ ಆದೇಶವನ್ನು ಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಧಾರವಾಡ ಸೆಂಟ್ರಲ್) : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತೇನು ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ, ಅದನ್ನು convert ಮಾಡಿ ಚರ್ಚೆ ಮಾಡುವುದಕ್ಕೆ ವಿರೋಧ ಪಕ್ಷದ ನಾಯಕರಿಗೆ ಮತ್ತು ಭಾರತೀಯ ಜನತಾ ಪಾರ್ಟಿಯ ಎಲ್ಲಾ ಸದಸ್ಯರಿಗೆ ತಾವು ಅವಕಾಶ ಕೊಟ್ಟಿದ್ದೀರಿ. ಈ ವಿಷಯದ ಮೇಲೆ ಈಗಾಗಲೇ ಮಾನ್ಯ ಗೋವಿಂದ ಕಾರಜೋಳರವರು ಸಾಕಷ್ಟು ವಿಚಾರಗಳ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಮೊದಲನೆಯದಾಗಿ ನಾನು ಮಾತನಾಡವುದು ಗೋವಿಂದ ಕಾರಜೋಳರವರು ಮಾತನಾಡಿದಂಥ ಸಂದರ್ಭದಲ್ಲಿ ಇವತ್ತೇನು ವಿಧಾನಸಭೆ ಅಧಿವೇಶನ ನಡೆಯುತ್ತಿದೆ, ಈ ಭಾಗದ ಸಮಸ್ಯೆಗಳ ಬಗ್ಗೆಯೂ ಚರ್ಚೆ ಮಾಡಬೇಕು, ರೈತರ ಸಮಸ್ಯೆಗಳ ಬಗ್ಗೆಯೂ ಚರ್ಚೆ ಮಾಡಬೇಕು, ಒಂದು ಗಂಭೀರವಾದ ಆಲೋಚನೆಗಳು ಆಗಬೇಕು ಮತ್ತು ಒಂದು ನಿರ್ಧಾರಕ್ಕೆ ನಾವು ಬರಬೇಕಾಗಿದೆ. ಕಬ್ಬು ಬೆಳೆಗಾರರ ಸಮಸ್ಯೆ ಏನಿದೆ ಇದು ಇವತ್ತು ನಿನ್ನೆಯದಲ್ಲ, ಪ್ರತಿ ವರ್ಷ ಈ ಸಮಸ್ಯೆಗಳನ್ನು ನಾವು ಎದುರಿಸುತ್ತಿದ್ದೇವೆ. ಇದರ ಬಗ್ಗೆ ಅಂತಿಮವಾಗಿ ಘಟ್ಟಕ್ಕೆ ನಾವುತೆಗೆದುಕೊಂಡು ಬರಬೇಕಾಗಿದೆ. ಈ ರೀತಿ ಗಂಭೀರವಾದಂಥ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಶಾಸಕ ಮಿತ್ರರು ಆಡಳಿತ ಪಕ್ಷದವರಿರಬಹುದು ಅಥವಾ ವಿರೋಧ ಪಕ್ಷದವರಿರಬಹುದು, ಇದರಲ್ಲಿ ಎಲ್ಲರೂ participate ಮಾಡಿ ಈ ಚರ್ಚೆಗೆ Weight ಕೊಡಬೇಕು.

ಅದನ್ನು ಬಿಟ್ಟು ಒಬ್ಬ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಅಡೆ-ತಡೆ ಮಾಡುವುದು ಸರಿಯಾದುದಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ರಾಜಕೀಯವಾಗಿ ಮಾತನಾಡುವಂಥ ಸಂದರ್ಭದಲ್ಲಿ ರಾಜಕೀಯವಾಗಿ ಉತ್ತರ ಕೊಡುವುದಕ್ಕೂ ನಿಮಗೆ ಅಧಿಕಾರವಿದೆ. ಯಾರಾದರೂ ರಾಜಕೀಯವಾಗಿ ಮಾತನಾಡುವಾಗ ಅದಕ್ಕೆ ಉತ್ತರ ಕೊಡುವುದಕ್ಕೆ ಮಂತ್ರಿಗಳೂ ಇದ್ದಾರೆ, ಮುಖ್ಯಮಂತ್ರಿಗಳೂ ಇದ್ದಾರೆ. ನೀವ್ಯಾರೂ ಅದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ನೀವು ಬೇಕಾದರೆ ಮಂತ್ರಿಗಳಾಗಬಹುದು. ಆದರೆ, ಉತ್ತರ ಕೊಡುವುದಕ್ಕೆ ಹಕ್ಕಿರುವುದು ಮಂತ್ರಿಗಳಿಗೆ ಮತ್ತು ಮಂತ್ರಿಗಳವರೂ ಸಹಿತ ಒಬ್ಬ ಸದಸ್ಯರು ಮಾತನಾಡುವಾಗ ಅದನ್ನು ಪೂರ್ಣಗೊಳಿಸಲಿ, ನಂತರ ಏನು ಉತ್ತರ ಕೊಡುತ್ತಾರೋ ಕೊಡಲಿ. ನಿಮಗೆ defend ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ. ಸರ್ಕಾರ ನಡೆಸುವಂಥವರು, ಎಲ್ಲಾ ರೀತಿ ನಿಮಗೆ points ಇರುತ್ತವೆ, ಎಲ್ಲಾ ರೀತಿ ನಿಮಗೆ ಮಾಹಿತಿ ಇರುತ್ತದೆ. ಆ ರೀತಿ ನಡೆದುಕೊಂಡಾಗ ಈ ಒಂದು ಸದನಕ್ಕೆ ಗಾಂಭೀರ್ಯತೆ ಬರುವುದಕ್ಕೆ ಸಾಧ್ಯವಿದೆ. ಆ ದೃಷ್ಟಿಯಿಂದ ಇವತ್ತು ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ನಾನು agitation ನಡೆಯುವ ಸ್ಥಳಕ್ಕೆ ಹೋಗಿ ಬಂದಿದ್ದೇನೆ. ಶ್ರೀ ಗೋವಿಂದ ಕಾರಜೋಳರವರು, ಶ್ರೀ ಕುಮಾರಸ್ವಾಮಿಯವರು ಅಲ್ಲಿಗೆ ಹೋಗಿದ್ದರು, ನಾವೆಲ್ಲರೂ ಹೋಗಿ ಬಂದಿದ್ದೇವೆ ಶ್ರೀ ಸಿ.ಟಿ.ರವಿಯವರು ಬಂದಿದ್ದರು. ಇಡೀ ರಾಜ್ಯದಲ್ಲಿ ಕಳೆದ 2-3 ತಿಂಗಳಿಂದ ಅವರ ಹೋರಾಟ, ಅದು ಮಂಡ್ಯ ಭಾಗ ಇರಬಹುದು, ಬೆಳಗಾವಿ, ಬಾಗಲಕೋಟೆ, ಬಿಜಾಪುರ ಜಿಲ್ಲೆಗಳಲ್ಲಿ ಇರಬಹುದು, ಈ ಭಾಗಗಳಲ್ಲಿ ಸಕ್ಕರೆ ಕಾರ್ಖಾನೆಗಳು ಜಾಸ್ತಿ, ಕಬ್ಬು ಬೆಳೆಯುವ ರೈತರು ಜಾಸ್ತಿ ಹೆಚ್ಚು quantity ಬೆಳೆಯುವಂಥದ್ದು ಬೆಳಗಾವಿ, ಬಾಗಲಕೋಟೆ, ಬಿಜಾಪುರ ಮತ್ತು ರಾಜ್ಯದ ಇನ್ನೂ ಬೇರೆ ಬೇರೆ ಜಿಲ್ಲೆಗಳಲ್ಲಿದೆ. ಆದರೆ, ಇಲ್ಲಿ ಕಬ್ಬು ಬೆಳೆಯುವಂಥದ್ದು ಜಾಸ್ತಿ. ಹೀಗಾಗಿ ಮಂಡ್ಯ ಭಾಗದಲ್ಲಿ ರೈತರೂ ಕಬ್ಬು ಬೆಳೆಯುತ್ತಾರೆ, ಇದನ್ನು ಪ್ರತಿ ವರ್ಷ ನಾವು ನೋಡುತ್ತಿದ್ದೇವೆ. ನಾನು ಹಿಂದೆ Revenue Minister ಆಗಿದ್ದಾಗ ಸಕ್ಕರೆ ಇಲಾಖೆ ಕೂಡ ನನಗೆ additional Charge ಆಗಿತ್ತು. ಅವತ್ತೂ ಸಹ ರೈತರು ನಮ್ಮ ಹತ್ತಿರ ಬರುತ್ತಿದ್ದರು, ಫ್ಯಾಕ್ಟರಿ

ಮಾಲೀಕರೂ ಸಹ ಬರುತ್ತಿದ್ದರು. ಪ್ರತಿ ವರ್ಷ ಬೆಲೆ ನಿಗದಿ ಮಾಡಿ ಎಂದು ಅದಕ್ಕೋಂದು ಹೋರಾಟ ನಡೆಸುವುದು ಇರುತ್ತಿತ್ತು ನಾನು ಸಕ್ಕರೆ ಸಚಿವ ನಾಗಿದ್ದಾಗ ಸಹ ರೈತ ಸಂಘದ ಪ್ರಮುಖರನ್ನು ಕರೆಸಿ, ಕಾರ್ಖಾನೆ ಮಾಲೀ ಕರನ್ನು ಕರೆಸಿ ಏನೋ ಒಂದು ದಾರಿ ಹುಡುಕಿ ಅದಕ್ಕೊಂದು ಯೋಗ್ಯವಾದ ಬೆಲೆ ನಿಗದಿ ಮಾಡುವಂಥ ಪ್ರಯತ್ನ ಅವತ್ತಿನಿಂದ ಮಾಡಿದ್ದೇವೆ. ನಂತರ ನಾನು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅವತ್ತು ಸಹಿತವಾಗಿ ಬಹುಶಃ ಹಿಂದಿನ ನಮ್ಮ ರಾಜ್ಯದ ಇತಿಹಾಸದಲ್ಲಿ ಯಾವುದೇ ಸರ್ಕಾರಗಳು ಒಂದು recognized committee ಮಾಡಿರಲಿಲ್ಲ. ಆ ಸಂದರ್ಭದಲ್ಲಿ ನಮ್ಮ ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದೇವೆ. ಕಮಿಟಿ ಮಾಡಿ ಅದಕ್ಕೊಂದು ಕಾನೂನು ಬದ್ಧವಾದಂಥ entity ಕೊಟ್ಟಿದ್ದೇವೆ. ನಂತರ ಅವರು ಹಲವಾರು ಸಭೆಗಳನ್ನು ಮಾಡಿದರು, ಇದು ಕಬ್ಬು ನುರುಸುವಿಕೆ ಯಾವಾಗ ಪ್ರಾರಂಭವಾಗುತ್ತದೆಯೋ ಅದಕ್ಕಿಂತ ಮುಂಚೆ 2–3 ತಿಂಗಳಲ್ಲಿ ಈ process ಪ್ರಾರಂಭವಾಗಬೇಕು. ರೈತರು ಬೀದಿಗಿಳಿದು ಹೋರಾಟ ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಈ ಎಲ್ಲಾ process ಆಗಬಾರದು. ರೈತರು ಹೋರಾಟ ಮಾಡುವುದಕ್ಕಿಂತ ಮುಂಚೆಯೇ ಈ ಎಲ್ಲಾ process start ಆಗಬೇಕು. ಆಗ ಮಾತ್ರ ಶಾಂತ ರೀತಿಯಿಂದ ಏನಾದರೂ ಒಂದು ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ರೈತರಿಗೂ convince ಮಾಡುವುದಕ್ಕೆ ಸಾಧ್ಯ. ಅದನ್ನು ಬಿಟ್ಟು agitation ಮಾಡುತ್ತಿದ್ದಾರೆ, ಬೀದಿಗಿಳಿದಿದ್ದಾರೆ, ನಮ್ಮ ಶ್ರೀ ಪ್ರಕಾಶ್ ಹುಕ್ಕೇರಿರವರ ಮನೆಯ ಮುಂದೆ ಸಹ ಧರಣಿ ಕುಳಿತರು. ಶ್ರೀ ಗೋವಿಂದ ಕಾರಜೋಳರವರ ಮನೆಯ ಮುಂದೆ ಸಹ ಧರಣಿ ಕುಳಿತರು. ಇವೆಲ್ಲಾ ಆದ ನಂತರ ನಾವು ಹೋಗಿ ಸಭೆ ಮಾಡುತ್ತೇವೆ, ಅವತ್ತು ರೈತರ ಬೇಡಿಕೆ ಇತ್ತು ಬಹುಶಃ ಹಲವಾರು ರಾಜ್ಯಗಳಲ್ಲಿ ಒಂದು ಕಾನೂನಿದೆ, ಏಕೆಂದರೆ ದರ ನಿಗದು ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಅದ ಕ್ಕೊಂದು ಅಧಿಕಾರ ಬೇಕೆಂದರೆ ಈ ರೀತಿ ಏನಾದರೂ ಒಂದು ಕಾನೂನಿನ ಕಟ್ಟಳೆ ಬೇಕಾಗುತ್ತದೆ. ಏಕೆ ನಾನು ಅವರಿಗೆ ಅಭಿನಂದನೆ ಅರ್ಪಿಸಬೇಕು? ಸಕ್ಕರೆ ಮಾರಾಟದ ಮೇಲೆ ಹಾಕಲಾಗಿದ್ದ VAT ಅನ್ನು ಇವತ್ತು ತೆಗೆದಿದ್ದಾರೆ.

ಅದಕ್ಕೆ ನಾನು ಮುಖ್ಯಮಂತ್ರಿಗಳಿಗೆ ವೈಯಕ್ತಿಕವಾಗಿ ಇರತಕ್ಕಂಥ ಅಭಿನಂದನೆಗಳನ್ನು ಹೇಳುತ್ತಿದ್ದೇನೆ. ಇನ್ನೊಂದು ವಿಚಾರ ಹೇಳಬೇಕೆಂದರೆ, ನಮ್ಮ ಸಕ್ಕರೆ ಮಂತ್ರಿಗಳು ಇನ್ನೊಂದು ದಿಟ್ಟ ನಿಲುವನ್ನು ತೆಗೆದುಕೊಂಡಿದ್ದಾರೆ. ಅವರೂ ಕೂಡ ಒಬ್ಬ ಕಬ್ಬು ಬೆಳೆಗಾರರೇ ಆಗಿದ್ದಾರೆ ಸಕ್ಕರೆ ಕಾರ್ಖಾನೆಗಳ ಪಕ್ಕದಲ್ಲೇ ಬೆಳೆದಿರತಕ್ಕವರಾಗಿದ್ದಾರೆ, ಸಕ್ಕರೆ ಕಾರ್ಖಾನೆಯ ಆಗು ಹೋಗುಗಳನ್ನು ಬಲ್ಲವರಾಗಿದ್ದಾರೆ. ಆದರೆ ಅವರು ಯಾವುದೇ ಆಡಳಿತ ಮಂಡಳಿಯಲ್ಲಿ ಇಲ್ಲ. ಅವರ ಚಿರಂಜೀವಿಯವರು ಒಂದು ಸಕ್ಕರೆ ಕಾರ್ಖಾನೆಯಲ್ಲಿ ನಿರ್ದೇಶಕರಾಗಿದ್ದಾರೆ ಸಕ್ಕರೆ ಕಾರ್ಖಾನೆಗಳನ್ನು ಯಾವ ರೀತಿಯಲ್ಲಿ ನಡೆಸಬೇಕು ಎನ್ನತಕ್ಕಂಥ ಕಲ್ಪನೆ ಅವರಿಗಿದೆ. ಇವತ್ತು 2500 ರೂ.ಗಳನ್ನು ಒಂದುಟನ್ ಕಬ್ಬಿಗೆ ರೈತರಿಗೆ ಕೊಡಬೇಕೆಂದು ಸರ್ಕಾರ ಹೇಳಿದೆ. ನಾನೂ ಒಬ್ಬ ಕಬ್ಬು ಬೆಳೆಗಾರ. ಪ್ರತಿ ವರ್ಷವೂ 4–5 ಸಾವಿರ ಟನ್ ಕಬ್ಬನ್ನು ಸಕ್ಕರೆ ಕಾರ್ಖಾನೆಯೊಂದಕ್ಕೆ ಕಳುಹಿಸುತ್ತೇನೆ. 2500 ರೂ.ಗಳನ್ನು ಮೊದಲನೇ ಕಂತಿನಲ್ಲೇ ಕೊಡಬೇಕೋ ಅಥವಾ ಒಟ್ಟಾರೆ ಕಬ್ಬಿಗೆ 2500 ರೂ.ಗಳನ್ನು ಕೊಡಬೇಕೋ? ಎನ್ನುವುದು ಸ್ಪಷ್ಟವಾಗಿ ರೈತರಿಗೆ ಇನ್ನೂ ಮನವರಿಕೆಯಾಗಿಲ್ಲ. ಒಂದು rate ಅನ್ನು fix ಮಾಡಿದ್ದಾರೆ. ಇನ್ನೊಂದು ಕಡೆ ಉತ್ತರ ಕರ್ನಾಟಕದಲ್ಲಿ ಇರತಕ್ಕಂಥ ಕಾರ್ಖಾನೆಗಳಿಗೆ ಇನ್ನೊಂದು rate ಅನ್ನು fix ಮಾಡಿದ್ದಾರೆ. ಅಲ್ಲಿಯೂ ಕೂಡ 2500 ರೂ. ಗಳನ್ನು ಘೋಷಣೆ ಮಾಡಿದ್ದಾರೆ, ಇಲ್ಲಿಯೂ ಕೂಡ 2500 ರೂ.ಗಳನ್ನು ಘೋಷಣೆ ಮಾಡಿದ್ದಾರೆ. ಅಲ್ಲಿ ex-gate, ಇಲ್ಲಿ ex-field, ಇದು ಒಂದು ಕಡೆ ನಮಗೆ ಸಮಾಧಾನ ತರತಕ್ಕಂಥ ವಿಷಯವಾಗಿ. ಆದರೆ ಅನೇಕ ಸಕ್ಕರೆ ಕಾರ್ಖಾನೆಗಳು ಸರ್ಕಾರ ಘೋಷಣೆ ಮಾಡಿರತಕ್ಕಂಥ 2500 ರೂ,ಗಳನ್ನು ಕೊಡಲಿಕ್ಕೆ ನಮಗೆ ಸಾಧ್ಯವಾಗುವುದಿಲ್ಲ, ಸಾಧ್ಯವಿಲ್ಲ. ಸಕ್ಕರೆ ಧಾರಣೆ ಬಿದ್ದು ಹೋಗಿದೆ, ಹೊರದೇಶದಿಂದ ಸಕ್ಕರೆಯನ್ನು ನಮ್ಮ ದೇಶಕ್ಕೆ ತಂದಿರುವುದರಿಂದ ಸಕ್ಕರೆ ಧಾರಣೆ ಕುಸಿದಿದೆ ಎಂದು ಹೇಳುತ್ತಿದ್ದಾರೆ. ನಮ್ಮ ಸಕ್ಕರೆ ಕಾರ್ಖಾನೆಗಳಿಗೆ 2500 ರೂ ಗಳನ್ನು ಕೊಡಲಿಕ್ಕೆ ಆಗುವುದಿಲ್ಲವೆಂದು, ಬಹಳಷ್ಟು ಸಕ್ಕರೆ ಕಾರ್ಖಾನೆಗಳ ಮಾಲೀಕರಾಗಿರತಕ್ಕಂತವರು ಇಲ್ಲಿ ಪಕ್ಷಭೇಧವಿಲ್ಲದೆ ಚರ್ಚೆ ಮಾಡೋಣ ಒಂದು ಕಡೆ ಕಾರ್ಖಾನೆ ಬದುಕಬೇಕು, ಇನ್ನೊಂದು ಕಡೆ

ರೈತನೂ ಬದುಕಬೇಕು. ಇಬ್ಬರಿಬ್ಬರ ಮಧ್ಯೆ ನೀವು ಏನಾದರೂ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನನಗೆ ಮಾನ್ಯ ಪ್ರಕಾಶ್ ಹುಕ್ಕೇರಿಯವರ ಸ್ವಭಾವ ಗೊತ್ತಿದೆ. ಅವರು ಯಾವುದಾದರೂ ಕೆಲಸವನ್ನು ಛಲದಿಂದ ಮಾಡಿ ತೋರಿಸುವಂತಹ ಒಬ್ಬ ಸಾಮರ್ಥ್ಯವುಳ್ಳವರು ನಮ್ಮ ಸಕ್ಕರೆ ಸಚಿವರಾಗಿದ್ದಾರೆ ಸಕ್ಕರೆ ಖಾತೆಯನ್ನು ನಮ್ಮ ಜಿಲ್ಲೆಯವರೊಬ್ಬರಿಗೆ ಕೊಟ್ಟಿರುವುದಕ್ಕಾಗಿ ಈ ಜಿಲ್ಲೆಯಲ್ಲಿ ಇರತಕ್ಕಂಥ ಕಬ್ಬು ಬೆಳೆಗಾರರ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತೊಂದು ಸಲ ನಾನುಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಂತಹ ಒಬ್ಬ ದಿಟ್ಟ ಸಾಮರ್ಥ್ಯವುಳ್ಳ, ಹಿಡಿದ ಕೆಲಸವನ್ನು ಮಾಡದೇ ಬಿಡಲಾರದಂತಹ ಛಲಗಾರನೊಬ್ಬನನ್ನು ಇವತ್ತು ಸಕ್ಕರೆ ಖಾತೆಯ ಮಂತ್ರಿಗಳನ್ನಾಗಿ ಮಾಡಿರತ್ತಕ್ಕದ್ದು ನಮ್ಮ ಜಿಲ್ಲೆಯ ಸೌಭಾಗ್ಯ ಎಂದು ನಾನು ಭಾವಿಸಿಕೊಂಡಿದ್ದಾನೆ. ಸನ್ಮಾನ್ಯ ಮುಖ್ಯಮಂತ್ರಿಗಳೆ, ಅವರಿಗೆ ಸಂಪೂರ್ಣ ಅಧಿಕಾರ ಕೊಡಿ. ಅವರಿಗೆ ಯಾವ ವಿಷಯದಲ್ಲಿ ಸಂಪೂರ್ಣವಾದ ಅಧಿಕಾರ ಕೊಡಬೇಕೆನ್ನುವುದನ್ನು ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಸಕ್ಕರೆ ಕಾರ್ಖಾನೆಗಳ ಮಾಲೀಕರು ಮೊಂಡು ಹಿಡಿದು ಕುಳಿತಿದ್ದಾರೆ. 2500 ರೂ.ಗಳನ್ನು ಕೊಡಲಿಕ್ಕೆ ಆಗುವುದಿಲ್ಲ ಎನ್ನುವಂತಹ ವಾದವನ್ನು ನಮ್ಮ ಮುಂದೆ ಮತ್ತು ರೈತರ ಮುಂದೆ ಮಂಡನೆ ಮಾಡುತ್ತಿದ್ದಾರೆ. ಇವತ್ತು ಕಾನೂನನ್ನು ಉಲ್ಲಂಘನೆ ಮಾಡತಕ್ಕಂಥ ಧೈರ್ಯವನ್ನು ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಪ್ರಕಾಶ್ ಹುಕ್ಕೇರಿ ಸಾಹೇಬರಿಗೆ ನೀವು ಅಧಿಕಾರ ಕೊಡಬೇಕು. ಈ ರಾಜ್ಯದಲ್ಲಿ ಇರತಕ್ಕಂಥ ಯಾವ ಸಕ್ಕರೆ ಕಾರ್ಖಾನೆಗಳ ಮಾಲೀಕರು, 2500 ರೂ.ಗಳನ್ನು ಕೊಡುವುದಿಲ್ಲವೋ, ಅಂತಹ ಎಲ್ಲಾಸಕ್ಕರೆ ಕಾರ್ಖಾನೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು, ಇವತ್ತೇನು ರಸ್ತೆಯಲ್ಲಿ ನಿಂತು ರೈತರು ಬೇಡಿಕೆಯನ್ನು ಇಟ್ಟಿದ್ದಾರೆ, ಇವತ್ತೇನು ಮೊದಲನೇ ಕಂತಾಗಿ 2500 ರೂ.ಗಳನ್ನು ಕೊಡಬೇಕೆಂಬ ಘೋಷಣೆಯನ್ನೇನು ಮಾಡಿದ್ದೀರಿ, ಇನ್ನೊಂದು ಸಲ ಹೊರಗಡೆ ಹೋಗಿ ರೈತರಿಗೆ ಹೇಳಬೇಕು. ಈ ರಾಜ್ಯದಲ್ಲಿ ಇರತಕ್ಕಂಥ ಯಾವ ಸಕ್ಕರೆ ಕಾರ್ಖಾನೆ ಮಾಲೀಕ 2500 ರೂ.ಗಳನ್ನು ಕೊಡುವುದಿಲ್ಲವೋ, ಅಂತಹ ಎಲ್ಲಾ ಸಕ್ಕರೆ ಕಾರ್ಖಾನೆಗಳನ್ನು ಸರ್ಕಾರದ ವಶಕ್ಕೆ ನಾನು ತೆಗೆದುಕೊಳ್ಳುತ್ತೇನೆ, ನೀವೇನು

ಇಲ್ಲಿ 3000 ರೂ.ಗಳನ್ನು ಕೊಡಬೇಕೆಂದು ಕೇಳುತ್ತಿದ್ದೀರೋ, ಅದನ್ನು ಖಂಡಿತ ವಾಗಿಯೂ ನಾನು ಕೊಡುತ್ತೇನೆ ಎಂದು ಹೇಳುವಂತಹ ಧೈರ್ಯವನ್ನು ನಮ್ಮ ಮಾನ್ಯ ಸಕ್ಕರೆ ಸಚಿವರು ತೋರಿಸಬೇಕು ಎನ್ನುವಂತಹ ನನ್ನ ಸಣ್ಣ ವಿನಂತಿಯನ್ನು ಅವರಲ್ಲಿ ಮಾಡಿಕೊಳ್ಳುತ್ತೇನೆ ಅದರ ಜೊತೆಗೆ ರೈತರೇ ಸೇರಿ ಸ್ಥಾಪಿಸಿದ ಸಹಕಾರಿ ಸಕ್ಕರೆ ಕಾರ್ಖಾನೆಗಳಿವೆ. ಮಾನ್ಯ ಸಕ್ಕರೆ ಸಚಿವರಿಗೆ ಸಹಾಯ ಮಾಡಲಿಕ್ಕೆ ಅವರ ಪಕ್ಕದಲ್ಲೇ ಮಾನ್ಯ ಸಹಕಾರಿ ಸಚಿವರೂ ಸಹ ಕುಳಿತಿದ್ದಾರೆ. ನಿಮ್ಮ ಆದೇಶವನ್ನು ಯಾರು ಪಾಲಿಸುವುದಿಲ್ಲವೋ ಯಾವ ಸಹಕಾರಿ ಸಕ್ಕರೆ ಕಾರ್ಖಾನೆಗಳು ಪಾಲಿಸುವುದಿಲ್ಲವೋ, ಅಂತಹ ಎಲ್ಲಾ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಯನ್ನು ಕಿತ್ತು ಹಾಕಿ. ನಮ್ಮ ಸಹಕಾರಿ ಸಚಿವರು, ಆ ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಅಧ್ಯಕ್ಷರಾಗಿ, ಖಾಸಗಿಯವರೊಂದಿಗೆ ಪೈಪೋಟಿಯನ್ನು ಮಾಡುವುದರ ಜೊತೆ, ಈ ರಾಜ್ಯದ ರೈತರ ಮೆಚ್ಚುಗೆಯನ್ನು ಪಡೆದುಕೊಳ್ಳುವಂತಹ ಕೆಲಸವನ್ನು ನಮ್ಮ ಸಹಕಾರಿ ಸಚಿವರು ಮತ್ತು ಸಕ್ಕರೆ ಸಚಿವರು ಕೂಡಿ ಮಾಡಿದರೆ ಬಹುಶಃ ಇವತ್ತೇನು ರಸ್ತೆಯ ಮೇಲೆ ಕೂಗನ್ನು ಕೂಗುತ್ತಿದ್ದಾರೆ, ಆ ರೈತನಿಗೆ ನೆಮ್ಮದಿ ಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಬೆಳಗಾಂನಲ್ಲಿ ನಡೆಯುತ್ತಿರುವ ಅಧಿವೇಶ ನವು ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಪುಟ್ಟಣ್ಣಯ್ಯನವರು ರೈತ ಸಂಘದ ಅಧ್ಯಕ್ಷರಾಗಿದ್ದಾರೆ. ಅವರು ಎಲ್ಲೇ ಕುಳಿತಿದ್ದರೂ ನಮ್ಮ ರೈತರ ಹೋರಾಟಕ್ಕೆ ಶಕ್ತಿಯನ್ನು ಕೊಡಬೇಕು.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ :- ಒಂದು ನಿಮಿಷ..

ಶ್ರೀ ಲಕ್ಷ್ಮಣ ಎಸ್.ಸವದಿ :- ನಾನು ಮಾತನಾಡಿ ಮುಗಿಸುತ್ತಾನೆ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ :- ನಿಮಗೆ supportive ಆಗಿಯೇ ನಾನು ಮಾತನಾಡುತ್ತಿದ್ದೇನೆ. ಇಷ್ಟು ಚೆನ್ನಾಗಿ ಇಲ್ಲಿ ಮಾತನಾಡುತ್ತಿದ್ದಿರಿ. ನೀವಿಬ್ಬರೂ ಅಧಿಕಾರದಲ್ಲಿ ಇದ್ದಾಗ ಅದನ್ನೇಕೆ ಮಾಡಲಿಲ್ಲ? ಹಿಂದೆ ನೀವೇ ಸಹಕಾರಿ ಸಚಿವರಾಗಿದ್ದಿರಿ.

ಶ್ರೀ ಲಕ್ಷ್ಮಣ ಎಸ್.ಸವದಿ :- ನಾನು ಇದ್ದಾಗ ಏನು ಮಾಡಿದೆ ಎಂಬುದನ್ನು ಹೇಳುತ್ತೇನೆ. ನಾನು ಇನ್ನೂ ಆ ವಿಷಯಕ್ಕೆ ಬಂದಿಲ್ಲ. ನಾನು ಸಂಪೂರ್ಣವಾಗಿ ಮಾತನಾಡಿ ಮುಗಿಸಿದ ಮೇಲೆ, ನನ್ನ ಮಾತಿನಲ್ಲಿ ಏನಾದರೂ ತಪ್ಪಾಗಿದ್ದರೆ, ತಾವು ಹೇಳುವಿರಂತೆ. ಸನ್ಮಾನ್ಯ ಮುಖ್ಯಮಂತ್ರಿಗಳೆ, ಅಥಣಿ ತಾಲ್ಲೂಕಿನಲ್ಲಿ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ಎಂಬುದೊಂದು ಇದೆ ಬಹುಶಃ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಇಲ್ಲಿ ಇಲ್ಲ. ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಿಂದೆ ಮಾನ್ಯ ಡಿ.ಕೆ.ಶಿವಕುಮಾರ್‌ರವರು ಸಹಕಾರ ಸಚಿವರಾಗಿದ್ದ ಸಂದರ್ಭದಲ್ಲಿ ಆ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಲಿಕ್ಕೆ ನಮಗೆ ಸಹಾಯ ಮಾಡಿದ್ದರು. ಪಾಪ! ಇವತ್ತು ಅವರ ಮಂತ್ರಿಗಳಾಗಿಲ್ಲ. ಯಾವುದೋ ಕಾರಣಕ್ಕೆ ಅವರು ಇವತ್ತೂ ಈ ವಿಧಾನಸಭೆಯಲ್ಲಿ ಬಂದಿಲ್ಲ ಅವರಿಗೆ ಪರೋಕ್ಷವಾಗಿ ಅಭಿನಂದನೆಗಳನ್ನು ಹೇಳಬೇಕೆಂಬ ಬಹಳಷ್ಟು ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ. ಮಾನ್ಯ ಹೆಚ್.ಕೆ. ಪಾಟೀಲ್‌ರವರೂ ಸಹ ನಮಗೆ ಸಹಾಯ ಮಾಡಿದ್ದರು ಅಥಣಿ ತಾಲ್ಲೂಕಿನಲ್ಲಿ ಇರತಕ್ಕಂಥ 18 ಸಾವಿರ ರೈತರು ಎರಡೆರಡು ಸಾವಿರ ರೂ.ಗಳನ್ನು ಕೂಡಿ ಹಾಕಿ, ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿದರು. ಆ ಸಕ್ಕರೆ ಕಾರ್ಖಾನೆ ಸುಮಾರು 12 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದೆ. ಸನ್ಮಾನ್ಯ ಹಿರಿಯರಾಗಿರತಕ್ಕಂಥ ಮಾಲೀಕಯ್ಯ ಗುತ್ತೇದಾರ್ ಸಾಹೇಬರು ನನಗೆ ಕೇಳಿದರು. ನೀವು ಇದ್ದಾಗ ಏಕೆ ಮಾಡಲಿಲ್ಲ? ಎಂದು ಕೇಳಿದರು. ನಾವೂ ಕೂಡ ಒಳ್ಳೆಯದು ಮಾಡಿದ್ದೇವೆ. ಇಡೀ ರಾಜ್ಯದಲ್ಲಿ ಯಾವುದೇ ಸಕ್ಕರೆ ಕಾರ್ಖಾನೆ ಇರಲಿ, ನೀವು ಎಲ್ಲಾ ಸಕ್ಕರೆ ಕಾರ್ಖಾನೆ ಇರಲಿ, ನೀವು ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಹಿತಿ ತರಿಸಿ ನೋಡಿ. ನಮ್ಮದು ಡಿಸ್ಟಿಲರಿ ಇಲ್ಲ, ನಮ್ಮದು Co-generation ಇಲ್ಲ, ನಾನು ಅದರಲ್ಲಿ Director ಸಹ ಆಗಿಲ್ಲ. ಕಳೆದ ಬಾರಿ 2650 ರೂ.ಗಳನ್ನು ನೇರವಾಗಿ ರೈತನ ಮನೆ ಬಾಗಿಲಿಗೆ ಮುಟ್ಟಿಸಿರತಕ್ಕ ಕೆಲಸ ಮಾಡಿದ್ದೇವೆ. Transportation and harvesting charges ಸಹಿತ ಕೊಟ್ಟಿದ್ದೇವೆ. 3100 ರೂ.ಗಳನ್ನು ಆ ಕಾರ್ಖಾನೆ ಕೊಟ್ಟಿರತಕ್ಕದ್ದು. ಅವತ್ತು ಸಕ್ಕರೆ ಧಾರಣೆ ಸುಮಾರು 3200 ರೂ.ಗಳು ಇತ್ತು. ಆ ಕಾರ್ಖಾನೆಗೆ ಆ ಶಕ್ತಿಯಿತ್ತು. ದರ

ಹೆಚ್ಚಿಗೆ ಕೊಟ್ಟರು. ಆ ಆಡಳಿತ ಮಂಡಳಿಯವರು ನನ್ನನ್ನು ಕೇಳಿದರು 2650 ರೂ.ಗಳಿಗೆ ಸಕ್ಕರೆ ಮಾರಾಟ ಮಾಡುತ್ತಿದ್ದೇವೆ, ಇವತ್ತಿನ ದಿವಸ ನಾವು ಯಾವ ದರವನ್ನು ಕೊಡಬೇಕೆಂದು ಕೇಳಿದರು, ನಾನು ಹೇಳಿದೆ, ಈಗಾಗಲೇ ನಮ್ಮ ಜಿಲ್ಲೆಯವರಾಗಿರತಕ್ಕಂಥ, ನಮ್ಮ ಹಿರಿಯರಾಗಿರತಕ್ಕಂಥ ಮಾನ್ಯ ಪ್ರಕಾಶ್ ಹುಕ್ಕೇರಿಯವರು ಘೋಷಣೆ ಮಾಡಿದ್ದಾರೆ ಬೇರೆ ಕಾರ್ಖಾನೆಗಳು ಮತ್ತು ರೈತರ ನಡುವೆ ಅಷ್ಟನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ವಾದ ವಿವಾದ ಗಳು ಅಥವಾ ಯುದ್ಧ ಪ್ರಾರಂಭವಾಗಿದೆ. ನಮ್ಮೆಲ್ಲರ ಸುದೈವದಿಂದ ಬೆಳಗಾಂ ನಲ್ಲಿ ಅಧಿವೇಶನ ಪ್ರಾರಂಭವಾಗಿದೆ. ನಾಡಪ್ರಭು ನಮ್ಮ ಜಿಲ್ಲೆಗೆ ಬರುತ್ತಾರೆ, ನಮ್ಮೆಲ್ಲಾ ಅಳಲನ್ನು ನಾವು ಅವರ ಮುಂದೆ ತೋರಿಸಿಕೊಳ್ಳೋಣ, ಆ ಅಳಲನ್ನು ಕೇಳಿಕೊಂಡು ನಾಡ ಪ್ರಭುಗಲಾಗಿರತಕ್ಕ ಸನ್ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ, ನನಗೆ ಗೊತ್ತಿದೆ, ನಿಮ್ಮ ಮೇಲೆ ಸಂಪೂರ್ಣ ಭರವಸೆ ಇದೆ, ರೈತರ ಬಗ್ಗೆ ನಿಮಗೆ ಇರತಕ್ಕಂಧ ಕಳಕಳಿ, ನಿಮ್ಮಲ್ಲಿ ಇರತಕ್ಕಂಥ ಉದಾರತೆಯನ್ನು ನಾನು ನೋಡಿದ್ದೇನೆ. ಪ್ರಭುಗಳೇ, ನೀವು ಒಂದು ಕೆಲಸ ವನ್ನು ಮಾಡಬೇಕು. ಈ ರಾಜ್ಯದ ಕಬ್ಬು ಬೆಳೆಗಾರರನ್ನು ಬದುಗಿಸಲಿಕ್ಕೆ ತಮ್ಮ ಕಾಲ ಮೇಲೆ ತಾವು ಜೀವನವನ್ನು ನಡೆಸಲಿಕ್ಕೆ ಸಹಾಯ ಮಾಡಿ ಇದೊಂದು ಸಾರಿ, ಮುಂದಿನ ಸಲ ನಾವು ನಿಮ್ಮನ್ನು ಕೇಳುವುದಿಲ್ಲ. ಕೇಳುವುದಿಲ್ಲವೆಂದರೆ, ಪ್ರಾರಂಭದಲ್ಲಿ ಮಾತನಾಡುವಾಗ ನಮ್ಮ ದೇಶದ ವಿದೇಶಿ ನೀತಿ, ಹೊರ ದೇಶದಿಂದ ಸಕ್ಕರೆ ತಂದಿರುವುದರಿಂದ ಕೇಂದ್ರ ಸರ್ಕಾರದಿಂದ ತಪ್ಪಾಗಿ ತಬಹುದು, ಅವರ ಯಾವುದೋ ಆಲೋಚನೆಯನ್ನಿಟ್ಟುಕೊಂಡು ಮಾಡಿರಿ ಬಹುದು. ಮುಂದೆ ಚುನಾವಣೆ ಬರಬಹುದು, ಗ್ರಾಹಕರಿಂದ ಮತಗಳು ಸಿಗಲಿ ಕ್ಕಿಲ್ಲ ಎಂಬ ಭಾವನೆಯನ್ನಿಟ್ಟುಕೊಂಡು ಹೊರದೇಶದಿಂದ ಸಕ್ಕರೆಯನ್ನು ತಂದಿ ರಬಹುದು. ಅದೇ ಕೇಂದ್ರ ಸರ್ಕಾರ ಮುಂದಿನ ಸಲ ಮಾಡುವುದಿಲ್ಲ. ನಮ್ಮ ದೇಶದ ಸಕ್ಕರೆಯನ್ನು ಹೊರದೇಶಕ್ಕೆ ಕಳುಹಿಸಬಹುದು. ಆವಾಗ ನಮಗೆ ಬೇಕಾದರೆ ಮೂರು ಸಾವಿರ, ಮೂರುವರೆ ಸಾವಿರಕ್ಕೆ ನಾವು ಸಕ್ಕರೆಯನನ್ನು ಮಾರಬಹುದು. ರೈತರು ಮುಂದಿನ ಸಾರಿ ನಿಮ್ಮನ್ನು ಕೇಳುವುದಿಲ್ಲ. ಇದೊಂದು ಸಾರಿ ನೀವು ಒಂದು ಟನ್ ಕಬ್ಬಿಗೆ ಕರ್ನಾಟಕ ಮತ್ತು ಕೇಂದ್ರ

ಸರ್ಕಾರಕ್ಕೇನು ತೆರಿಗೆಯನ್ನು ಕಟ್ಟುತ್ತೇವೆ, ಒಂದೇ ಉದಾರಣೆಯನ್ನು ಹೇಳುತ್ತೇನೆ, ಡಿಸ್ಟಿಲರಿ ಇರುವ ಕಾರ್ಖಾನೆಗಳೇನಿವೆ, ಒಂದು ಟನ್ ಕಬ್ಬಿಗೆ ಸುಮಾರು ರೂ.3250 ತೆರಿಗೆಯನ್ನು ಕಟ್ಟುತ್ತಾರೆ. ಆದುದರಿಂದ ನೀವು ಒಂದು ಸಾರಿ ದೊಡ್ಡ ಮನಸ್ಸು ಮಾಡಿ ಆ ಕಾರ್ಖಾನೆಯವರು ಕೊಡುವಂಥ ರೂ.1000 ಅನ್ನು ಆರೈತನ ಖಾತೆಗೆ ಕೊಟ್ಟರೆ ಬಹುಶಃ ಜೀವನದಲ್ಲಿ ಪ್ರತಿಯೊಬ್ಬ ರೈತ, ಏನು ನಮ್ಮ ವೀರಶೈವ ಬಸವಣ್ಣನವರ ಫೋಟೋವನ್ನು ನಮ್ಮ ಮನೆಯೊಳಗೆ ಹಾಕಿಕೊಳ್ಳುತ್ತೇವಲ್ಲ, ದೊಡ್ಡ ಮನಸ್ಸು ಮಾಡಿ ರೈತಕಟ್ಟತಕ್ಕಂಥ ರೂ.1000 ತೆರಿಗೆ ಹಣವನ್ನು ವಾಪಸ್ಸಾಗಿ ರೈತನ ಖಾತೆಗಳಿಗೆ ಕೊಟ್ಟರೆ ಜೀವನದಲ್ಲಿ ನಮ್ಮ ಮನೆಯೊಳಗೆ ಸಿದ್ದರಾಮಯ್ಯನವರ ಫೋಟೋವನ್ನೂ ಕೂಡ ಹಾಕುತ್ತೇವೆ ನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದಕ್ಕೆ ಸಕ್ಕರೆ ಸಚಿವರಲ್ಲಿ ನನ್ನದು ಇನ್ನೊಂದು ವಿನಂತಿ ಏನೆಂದರೆ, ಸ್ವಾಮಿ ಕಳೆದ ಸಾರಿಯೂ ನಾವು ಕಬ್ಬನ್ನು ಪೂರೈಸಿದ್ದೇವೆ, ಅನೇಕ ಕಾರ್ಖಾನೆಗಳು ನಾವು ರೂ.2500 ಕೋಡುತ್ತೇವೆಂದು ಘೋಷಣೆ ಮಾಡಿದವು. ಅವು ಖಾಸಗಿ ಕಾರ್ಖಾನೆಗಳಿರಬಹುದು, ಸಹಕಾರಿ ಕಾರ್ಖಾನೆಗಳಿರಬಹುದು, ರೂ.2500 ಗಳನ್ನು ಇವತ್ತು ಸರ್ಕಾರ ಘೋಷಣೆ ಮಾಡಿದೆ. ಕಳೆದ ವರ್ಷ ನಮ್ಮ ಜಿಲ್ಲೆ ಯಲ್ಲಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳು ರೈತರಿಗೆ ಟನ್ ಕಬ್ಬಿಗೆ ರೂ.2500 ಕೊಡುತ್ತೇವೆಂದು ಹೇಳಿದರು. ಆ ಮಾತನ್ನು ನಂಬಿ ನಮ್ಮ ಕಬ್ಬು ಬೆಳೆಗಾರರು ಆ ಕಾರ್ಖಾನೆಗಳಿಗೆ ಕಬ್ಬನ್ನು ಪೂರೈಕೆ ಮಾಡಿದರು. ಇವತ್ತಿಗೂ ಕೂಡ ಟನ್ ಕಬ್ಬಿಗೆ ರೂ.2500 ಕೊಟ್ಟಿದ್ದಾರೆ. ರೈತರಿಗೆ ಕೊಡಬೇಕಾದ ರೂ.300 ಇನ್ನೂ ಬಾಕಿ ಇದೆ, ಆ ಬಾಕಿಯನ್ನು ಯಾವಾಗ ಕೊಡಿಸುತ್ತೀರೆನ್ನುವುದನ್ನು ತಿಳಿಸಬೇಕು. ಬಹುಶಃ ನಮ್ಮ ಪ್ರಕಾಶ್ ಹುಕ್ಕೇರಿಯವರ ಬಗ್ಗೆ ನಮಗೆ ಅಪಾರವಾದ ನಂಬಿಕೆ ಇದೆ, 15 ದಿನಸದೊಳಗೆ, ಬಹುಶಃ ನನಗನಿಸುತ್ತದೆ ಈ ಅಧಿವೇಶನ ಮುಗಿ ಯುವುದರೊಳಗೆ ಆ ಬಾಕಿ ಹಣವನ್ನೂ ಕೊಡಿಸುತ್ತಾರೆ, ಅದರ ಜೊತಗೆ ಇವತ್ತೇನು ಐವತ್ತು ಸಾವಿರ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ, ಅವರಿಗೆ ಇವತ್ತು ಸರ್ಕಾರ, ಆ ಕಾರ್ಖಾನೆಗಳನ್ನು ಕಬ್ಜಕ್ಕೆ ತೆಗೆದುಕೊಳ್ಳುತ್ತೇವೆ, ಆ ಎಲ್ಲಾ

ಕಾರ್ಖಾನೆಗಳನ್ನು ನಮ್ಮ ವಶಕ್ಕೆ ತೆಗೆದುಕೊಳ್ಳುತ್ತೇವೆ, ನಾವೇ ನಿಮಗೆ ರೂ.3000 ಕೊಡುತ್ತೇವೆಂದು ಮುಖ್ಯಮಂತ್ರಿಗಳು ಘೋಷಣೆ ಮಾಡುತ್ತೀರಿ, ಈ ಬೆಳಗಾಂ ಅಧಿವೇಶನ ಇಡೀ ರಾಜ್ಯಕ್ಕೆ ಇತಿಹಾಸದ ಅಧಿವೇಶನವಾಗಲಿ, ಅಂಥ ಸದ್ಬುದ್ಧಿಯನ್ನು ಭಗವಂತ ನಿಮಗೆ ಕೊಡಲೆಂದು ನಿಮ್ಮಲ್ಲಿ ಕೈ ಮುಗಿದು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ನಿಮಗೆ ವಂದಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ ರಾಜೀವ್[ಕುಡಚಿ] :- ಮಾನ್ಯ ಉಪಾಧ್ಯಕ್ಷರೆ, ಪ್ರತಿವರ್ಷ ಕಬ್ಬು ಬೆಳೆಗಾರರು ರಸ್ತೆ ಮೇಲೆ ಬಂದು ಹೋರಾಟ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಅವೈಜ್ಞಾನಿಕ ಬೇಡಿಕೆಯನ್ನು ಕೇಳುವಂಥ ವೇದಿಕೆ ಇದಾಗಬೇಕು, ಆ ವೇದಿಕೆಯಾಗಿ ಬಳಸಿಕೊಳ್ಳಬೇಕೆನ್ನುವ ಭಾವನೆ ನನಗಿಲ್ಲ. ನಾನು ಬಹಳ ಸ್ಪಷ್ಟವಾಗಿ ಅಧ್ಯಯನವನ್ನು ಮಾಡಿದ್ದೇನೆ. ಒಂದು ಸಕ್ಕರೆ ಕಾರ್ಖಾನೆ 20 ಲಕ್ಷ ಟನ್ ಕಬ್ಬನ್ನು ನುರಿಸುತ್ತದೆಂದರೆ, ಬರೀ ರೂ.10 ಒಂದು ಟನ್ ಕಬ್ಬಿಗೆ ಜಾಸ್ತಿ ಕೊಟ್ಟರೆ ಒಂದು ಸಕ್ಕರೆ ಕಾರ್ಖಾನೆ 2 ಕೋಟಿ. ರೂ. ಕೊಡಬೇಕಾಗುತ್ತದೆ. ಹಾಗಾಗಿ ಒಂದು ಟನ್‌ಗೆ ರೂ.500, ರೂ.1000 ಜಾಸ್ತಿ ಕೊಡಿ ಎಂದು ಹೇಳಿ ಮೂರ್ಖತನದ ಮಾತನ್ನಾಡಲು ನಾನು ಈ ವೇದಿಕೆಯನ್ನು ಬಳಸಿಕೊಳ್ಳುತ್ತಿಲ್ಲ. ಕಬ್ಬು ಬೆಳೆಗಾರರ ಪ್ರತಿ ಟನ್ನಿನಿಂದ ಸರ್ಕಾರಕ್ಕೆ ಆದಾಯ ರೂ.3200/- ಇದೆ. ಆದರೆ ಸುಮಾರು 12-15 ತಿಂಗಳವರೆಗೆ ರೈತ ಕಷ್ಟಪಟ್ಟು ಹೊಲದಲ್ಲಿ ಏನು ಕಬ್ಬನ್ನು ಬೆಳೆಸುತ್ತಾನೆ, ಆ ಕಬ್ಬಿಗೆ ರೂ.2500 ಕೂಡ ಸರಿ ಯಾಗಿ ಘೋಷಣೆಯಾಗುತ್ತಿಲ್ಲ, ಎಷ್ಟು ವ್ಯತ್ಯಾಸವಿದೆ? ಅದೇ ಒಂದು ಟನ್ ಕಬ್ಬನ್ನು ಅವನು ಗಾಣಕ್ಕೆ ಕೊಟ್ಟರೆ ಸರ್ಕಾರಕ್ಕೆ ರೂ.3200/- ನಷ್ಟವಿದೆ, ಸರ್ಕಾರ ಈ ಸಮಯದಲ್ಲಿ ಬದ್ಧತೆಯನ್ನು ತೋರಿಸಬೇಕಾಗಿದೆ. ಪ್ರತಿ ಟನ್ ಕಬ್ಬಿಗೆ ನನಗೆ ರೂ.3200/- ಆದಾಯವಿದ ಎಂದರೆ, ಒಂದು ಕೆ.ಜಿ.ಕಬ್ಬಿಗೆ ಏನು ವೈಜ್ಞಾನಿಕ ವಾಗಿ ಬೆಲೆ ಬೆಳೆಗಾರನಿಗೆ ಸಿಗಬೇಕು ಆ ಬೆಲೆಯನ್ನು ನಾನು ಕೊಡಿಸಬೇಕೆ ನ್ನುವಂಥ ಬದ್ಧತೆಯನ್ನು ಈ ಸರ್ಕಾರದಿಂದ ನಿರೀಕ್ಷೆ ಮಾಡುತ್ತಿದ್ದೇನೆ. ಬೆಳ ಗಾವಿಯಲ್ಲಿ ಹೋದ ವರ್ಷ ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಯ ಒಂದು ಟನ್ ರೂ.2650.00 ಕೊಟ್ಟಿತ್ತು.

ಆದರೆ ಉಳಿದ ಸಕ್ಕರೆ ಕಾರ್ಖಾನೆಗಳು ಅದನ್ನು ಕೊಡಲಿಲ್ಲ ಸರ್ಕಾರವು `2500/- ಒಂದು ಟನ್‌ಗೆ ಕೊಡುತ್ತೇವೆಂದು ಏನು ಘೋಷಣೆಯನ್ನು ಮಾಡಿದ್ದಾರೆ, ಅದನ್ನು ನಾವು Calculation ಮಾಡಿದರೆ ನಾವು ಕರ್ನಾಟಕದಲ್ಲಿ 3,20,000.00 ಟನ್ ಕಬ್ಬನ್ನು ಬೆಳೆಯುತ್ತೇವೆ. 3 ಕೋಟಿ ಟನ್‌ನ ಪ್ರಕಾರ ಲೆಕ್ಕ ಮಾಡಿದರೆ ಒಂದು ಟನ್ ಮೇಲೆ ರೂ.150/- ವ್ಯತ್ಯಾಸ ಅಂದರೆ 480 ಕೋಟಿ ರೂಪಾಯಿ ರೈತರಿಗೆ ನಷ್ಟವಾಯಿತು. ಇದರ ಬಗ್ಗೆ ಲೆಕ್ಕ ಮಾಡುವವರು ಯಾರಯ? 480 ಕೋಟಿ ರೂಪಾಯಿಗಳು ಏನು ಸಣ್ಣ Amount ಅಲ್ಲ ಆದರೆ ಒಂದು ಸಕ್ಕರೆ ಕಾರ್ಖಾನೆಯು ರೂ.150/- ಜಾಸ್ತಿ ಕೊಡುತ್ತಿದೆ ಇನ್ನೊಂದು ಸಕ್ಕರೆ ಕಾರ್ಖಾನೆಯು ಒಂದು ಟನ್ ಕಬ್ಬಿಗೆ ರೂ.2300/- ಗಳನ್ನು ಕೊಡುತ್ತಿದೆ. ಹಾಗಾದರೆ ಎಲ್ಲಿದೆ ವೈಜ್ಞಾನಿಕತೆ? ರೈತರು ವರ್ಷಗಟ್ಟಲೆ ದುಡಿಯುತ್ತಿದ್ದಾರೆ. ಈ ಬಗ್ಗೆ ನಮ್ಮ ಮುಂದೆ ಉದಾಹರಣೆಗಳು ಇದ್ದಾವೆ. ಗುಜರಾತಿನ ಜಾಹ್ನವಿ ಸಕ್ಕರೆ ಕಾರ್ಖಾನೆಯು ಒಂದು ಟನ್ ಕಬ್ಬಿಗೆ ರೂ.3195/-ಕೊಡುತ್ತಿದೆ. ಬಾತೋರ್ಲಿ ಸಕ್ಕರೆ ಕಾರ್ಖಾನೆಯು ರೂ.3282/- ಒಂದು ಟನ್ ಕಬ್ಬಿಗೆ ಕೊಡುತ್ತಿದೆ. ಬಾತೋರ್ಲಿ ಸಕ್ಕರೆ ಕಾರ್ಖಾನೆಯು ರೂ 3282/- ಒಂದು ಟನ್ ಕಬ್ಬಿಗೆ ಕೊಡುತ್ತಿದ್ದಾರೆ ಅದೇ ರೀತಿಯಾಗಿ ಹರಿಯಾಣದಲ್ಲಿ ಒಂದು ಟನ್ ಕಬ್ಬಿಗೆ 2760/- ಕೊಡುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಒಂದು ಟನ್‌ಗೆ 2900/- ಇದೆ. ಉತ್ತರ ಖಂಡದಲ್ಲಿ ಒಂದು ಟನ್ ಕಬ್ಬಿಗೆ ರೂ.2950/- ಇದೆ. ಅಂದರೆ ಒಂದು ಟನ್‌ಗೆ ಗುಜರಾತ್, ಪಂಜಾಬ್, ಹರಿಯಾಣಕ್ಕೆ, ಉತ್ತರಖಂಡಕ್ಕೆ ಮತ್ತು ಕರ್ನಾಟಕಕ್ಕೆ ಹೋಲಿಸಿ ಕೊಂಡರೆ 3 ಕೋಟಿ ಟನ್‌ಗೆ ಒಂದು ಟನ್ ಮೇಲೆ ರೂ.500/- ಗಳಂತೆ average ಪ್ರಕಾರ ಲೆಕ್ಕ ಹಾಕಿದರೆ 1500/- ಕೋಟಿ ರೂಪಾಯಿಗಳು ಆಗುತ್ತದೆ. ರೈತರು ಯೋಚನೆ ಮಾಡುವುದು ತಪ್ಪಲ್ಲ ಅಲ್ಲವೇ? ರೂ.1500 ಕೋಟಿಗಳನ್ನು ಯಾವ ಸರ್ಕಾರವು ಯಾವ ಯೋಜನೆಯಲ್ಲೂ ರೈತರಿಗೆ ಘೋಷಣೆ ಮಾಡುತ್ತಿಲ್ಲ, ಆದರೆ ತಾನು ಬೆವರನ್ನು ಸುರಿಸಿ ಏನು ದುಡಿಯುತ್ತೇನೆ ಆ ದುಡ್ಡನ್ನು ಎಲ್ಲೋ ಒಂದು ಕಡೆ ಯಾರೋ ಲೂಟಿ ಮಾಡುತ್ತಿದ್ದಾರೆ, ಏಕೆ ನನಗೆ ನ್ಯಾಯ ಸಿಗಬಾರದು, ಎಂದು ಅದಕ್ಕಾಗಿ ಇವತ್ತು ಅವರು ಬಿಸಿಲಿನಲ್ಲಿ

ಕಬ್ಬು ಬೆಳೆಗಾರರು ಕುಳಿತಿದ್ದಾರೆ ಅಂದರೆ, ಇದುವರೆಗೆ ನಾವು ಮಾತುಕತೆ ಮೂಲಕ ಹೊಂದಾಣಿಕೆ ಮಾಡುತ್ತಿದ್ದೇವೆ. ಇವರು ರೂ.2000, ರೂ.2500 ಕೇಳಿದರೆ, ರೂ.2300ಕ್ಕೆ ಹೊಂದಿಸಿಕೊಳ್ಳೋಣ, ಇಲ್ಲ ರೂ.3000ಕ್ಕೆ ಹೊಂದಿಸಿ ಕೊಳ್ಳೋಣ, ಇಲ್ಲ ರೂ.3000ಕ್ಕೆ ಹೊಂದಿಸಿಕೊಳ್ಳೋಣ, ವೈಜ್ಞಾನಿಕತೆ ಎಲ್ಲಿ ಹೋಯಿತು? ರೈತನ ಬೆವರಿಗೆ ಸರಿಯಾದ ವೈಜ್ಞಾನಿಕ ಬೆಲೆ ಸಿಗಿವಂಥ ಒಂದು ವ್ಯವಸ್ಥೆ ಎಲ್ಲಿ ಹೋಯಿತು? ಹೋದ ಸಾರಿ ಈ ರಾಜ್ಯ ಸರ್ಕಾರವು ಏನು ಒಂದು ಅಧಿಸೂಚನೆಯನ್ನು ಹೊರಡಿಸುವುದರ ಮೂಲಕ ಕರ್ನಾಟಕ ಕಬ್ಬು ಖರೀದಿ ಮತ್ತು ಸರಬರಾಜು ನಿಯಂತ್ರಣ ಅಧಿನಿಯಮ 2013 ಅನ್ನು ಜಾರಿಗೆ ತಂದಿದೆ, ಇದು ಹೇಳಿಕೆಗೆ ಆಗಬಾರದು. ಇದರಲ್ಲಿ ಸೆಕ್ಷನ್ 4(f) ಬಹಳ ಸ್ಪಷ್ಟವಾಗಿ ಹೇಳುತ್ತೆ. ಸಕ್ಕರೆ, ಕಬ್ಬಿನಸಿಪ್ಪೆ, ಕಾಕಂಬಿ ಮತ್ತು ಪ್ರೆಸ್‌ಮಡ್‌ದಿಂದ ಬರುವ ಆದಾಯವನ್ನು ಪರಿಗಣನೆಗೆ ತೆಗೆದುಕೊಂಡು ಆದಾಯದ ಸೂತ್ರದ ಹಂಚಿಕೆಯ ಆಧಾರದ ಮೇಲೆ ಕಬ್ಬಿನ ಬೆಲೆಯನ್ನು ನಿರ್ಧರಿಸುವುದು. ಆ ಸೂತ್ರ ಮಾಡುವಂತಹ ತಜ್ಞರ ತಂಡವು ಎಲ್ಲಿದೆ? ನಮಗೆ ನಿಜವಾದಂತಹ ಸೂತ್ರವೇ ಇಲ್ಲ ಇವತ್ತು ನಾವು ಒಂದು ಟನ್ ಕಬ್ಬಿಗೆ ರೂ.2500 ಬೆಲೆಯನ್ನು ಘೋಷಣೆಯನ್ನು ಮಾಡಿದ್ದೇವೆ. ಇದನ್ನು ಸರ್ಕಾರವು ಕೊಡುತ್ತದೆ ಎಂದು ಹೇಳುತ್ತದೆ. ಇವರು ಯಾವ ಆಧಾರದ ಮೇಲೆ ಕೊಡಿಸುತ್ತಾರೆ.? ಇದರಿಂದ ಫ್ಯಾಕ್ಟರಿಗೆ ನಷ್ಟವಾಗುತ್ತದೆಯೋ ಅಥವಾ ರೈತರಿಗೆ ನ್ಯಾಯ ಸಿಗುತ್ತದೆಯೋ ಇಲ್ಲವೋ ಅದರ ಬಗ್ಗೆ ಸ್ಪಷ್ಟೀಕರಣವು ಇಲ್ಲ. ಇದರ ಬಗ್ಗೆ ತಜ್ಞರ ಸಮಿತಿಯು ಆಗಬೇಕಾಗಿತ್ತು. ಪ್ರತಿ ವರ್ಷ ಸಕ್ಕರೆ ಹಂಗಾಮು ಏನು ಪ್ರಾರಂಭವಾಗುತ್ತದೆ, ಇದು ಆಗುವುದಕ್ಕೆ ಮುಂಚೆ ಈ ಸಕ್ಕರೆ ಆದಾಯ ಎಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಪ್ರತಿ ವರ್ಷ ಇಷ್ಟು ಹಣವನ್ನು ಕೊಡುತ್ತೇವೆಂದು ಹೇಳಿ ಘೋಷಣೆಯನ್ನು ಮಾಡಬೇಕಾಗಿತ್ತು. ಅದೇ ರೀತಿಯಾಗಿ ರಾಜ್ಯ ಸರ್ಕಾರವು ಏನು ಈ ಮಂಡಳಿಯ ತೀರ್ಮಾನವನ್ನು ತೆಗೆದುಕೊಂಡು ಪ್ರತಿ ಟನ್‌ಗೆ ರೂ.2500/- ನಾವು ಘೋಷಣೆಯನ್ನು ಮಾಡಿದ್ದೇವೆಂದು ಹೇಳಿದ ಮೇಲೆ ಸಕ್ಕರೆ ಕಾರ್ಖಾನೆಯ ಮಾಲೀಕರು ರೈತರಿಂದ ಒಪ್ಪಿಗೆ ಪತ್ರವನ್ನು ಪಡೆದು ಕೊಳ್ಳುತ್ತಿದ್ದಾರೆ. 2013-14ನೇ ಹಂಗಾಮಿಗೆ ಕಬ್ಬು ಪೂರೈಸಲು ಒಪ್ಪಿಗೆ ಪತ್ರ

ಎಂದು ಬರೆಸಿಕೊಳ್ಳುತ್ತಿದ್ದಾರೆ. ಒಂಬತ್ತು ತಿಂಗಳು ಮುಂಚೆ ಪ್ರಾರಂಭವಾಗ ಬೇಕಾಗಿತ್ತು, ಅಕ್ಟೋಬರ್ ಒಂದನೇ ತಾರೀಕಿಗೆ ಉತ್ತರ ಕರ್ನಾಟಕದ ಈ ಭಾಗದಲ್ಲಿ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗಬೇಕು ಇಲ್ಲದಿದ್ದರೆ ರೈತ ಬೆಳೆದ ಬೆಳೆ ಒಳಗುವುದಕ್ಕೆ ಪ್ರಾರಂಭವಾಗುತ್ತದೆ. ರೈತ ಯಾವ ಪರಿಸ್ಥಿತಿಗೆ ಬರುತ್ತಾನೆಂದರೆ ಟನ್ ಕಬ್ಬಿಗೆ 200 ರೂ. ಕಡಿಮೆ ಆದರೂ ಪರವಾಗಿಲ್ಲ, ನಾನು ಬೆಳೆದಿರುವಂತಹ ಕಬ್ಬು ನನ್ನ ಕಣ್ಣ ಮುಂದೆ ಒಣಗಬಾರದು, ಅದು ಕಾರ್ಖಾನೆಗೆ ಹೋಗಲಿ ಎನ್ನುವಂತಹ ಭಾವನೆಗೆ ಬರುತ್ತಾರೆ. ಈ ಭಾವನೆಯ ದುರುಪಯೋಗವನ್ನು ಸಕ್ಕರೆ ಕಾರ್ಖಾನೆಯ ಮಾಲೀಕರು ತೆಗೆದುಕೊಳ್ಳುತ್ತಿ ದ್ದಾರೆ. ನಾನು ಸನ್ಮಾನ್ಯ ಸಚಿವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಇವತ್ತು ರೈತರ ಈ ಪರಿಸ್ಥಿತಿಯ ದುರುಪಯೋಗ ತೆಗೆದುಕೊಂಡು ಸಕ್ಕರೆ ಕಾರ್ಖಾನೆ ಮಲೀಕರು ಈ ಒಪ್ಪಿಗೆ ಪತ್ರವನ್ನು ಸಹಿ ಮಾಡಿಸಿಕೊಂಡಿದ್ದಾರಲ್ಲ ಇದರ ಬಗ್ಗೆ ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಎರಡನೇ ಸ್ಪಷ್ಟೀಕರಣ ಕೊಡಬೇಕು, 2500 ರೂ. ಎಂದು ಅವರು ಏನು ಘೋಷಣೆ ಮಾಡುತ್ತಿದ್ದಾರೆ ಅದು ಮೊದಲನೇ ಕಂತೋ ಅಥವಾ ಅದೇ ಫೈನಲ್ ಕಂತು ಆಗುತ್ತದೋ ಎನ್ನುವುದನ್ನು ಅವರು ಘೋಷಣೆ ಮಾಡಬೇಕು. ಸಕ್ಕರೆ ಕಾರ್ಖಾನೆಗಳಿಗೆ ನಷ್ಟವಾಗುತ್ತದೆ ಎನ್ನುವ ತಜ್ಞರು ವರದಿ 2500 ರೂ.ಗಳಿಂದ ಸಕ್ಕರೆ ಕಾರ್ಖಾನೆ ಗಳಿಗೆ ಮೋಸವಾಗುತ್ತದೆ, ಹಾನಿಯಾಗುತ್ತದೆ, ಅವರು ಮತ್ತೆ ಮೇಲೆ ಬರುವು ದಕ್ಕೆ ಸಾಧ್ಯವಾಗುವುದಿಲ್ಲವೆನ್ನುವಂತಹ ಪರಿಸ್ಥಿತಿ ಬರುವುದು ತಜ್ಞರ ವರದಿ ಪ್ರಕಾರ ನಿಜವಾಗಿ ಕಂಡು ಬಂದರೆ, ಸರ್ಕಾರಕ್ಕೆ ಏನೂ ಹಾನಿಯಾಗುವುದಿಲ್ಲ. ಪ್ರತಿ ಟನ್ ಕಬ್ಬಿಗೆ 3200 ರೂ.ಗಳಷ್ಟು ಆದಾಯ ಬರುತ್ತಿದೆ. ಅದರಲ್ಲಿ ಸ್ವಲ್ಪ ಭಾಗವನ್ನು ರೈತರಿಗೆ ಕೊಡುವಂತಹ ತೀರ್ಮಾನಕ್ಕೆ ಸರ್ಕಾರ ಬರಬೇಕು. ಮಾನ್ಯ ಉಪಾಧ್ಯಕ್ಷರೆ, ತಮ್ಮ ಮೂಲಕ ನಾನು ಈ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಈಗ ನಾವು ಏನು ಕಾನೂನುಗಳನ್ನು ಮಾಡಿದ್ದೇವೆ ಈ ಎಲ್ಲಾ ಕಾನೂನುಗಳು ಬರೀ ಪುಸ್ತಕದ ಸಾಲುಗಳಾಗಬಾರದು. ಇವತ್ತು ಏನು ಕಬ್ಬು ಬೆಳೆಗಾರರು ರಸ್ತೆ ಮೇಲೆ ಬಂದಿದ್ದಾರೆ ಇದಕ್ಕೆ ಶಾಶ್ವತವಾದ ಪರಿಹಾರ ಕೊಡುವುದಕ್ಕಾಗಿ ಪ್ರತಿ ವರ್ಷ ಒಂದು ವೈಜ್ಞಾನಿಕವಾದಂತಹ ಬೆಲೆಯನ್ನು

ನಾವು ಘೋಷಣೆ ಮಾಡುತ್ತೇವೆ ಎನ್ನುವುದರ ಜೊತೆಗೆ ಮಾನ್ಯ ಸಕ್ಕರೆ ಸಚಿವರು ಇನ್ನೊಂದು ಸ್ಪಷ್ಟೀಕರಣವನ್ನು ನಮಗೆ ಕೊಡಬೇಕು. ಹೋದ ವರ್ಷ 2650 ರೂ.ಗಳನ್ನು ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆ ಕೊಟ್ಟಿದೆ, ಉಳಿದ ಸಕ್ಕರೆ ಕಾರ್ಖಾನೆಗಳು ಏಕೆ ಕೊಟ್ಟಿಲ್ಲ,? ಅದರಿಂದ ಆಗುವಂತಹ ಸುಮಾರು 480 ಕೋಟಿ ರೂ. ರೈತರಿಗೆ ಬರಬೇಕಾದ ಹಣ ಬರಲಿಲ್ಲವೆಂದರೆ, ಅದರ ಹೊಣೆಯನ್ನು ಯಾರು ಹೊತ್ತುಕೊಳ್ಳುತ್ತಾರೆ? ಈ ಎಲ್ಲಾ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಸರ್ಕಾರ ತನ್ನ ಬದ್ಧತೆಯನ್ನು ತೋರಿಸ ಬೇಕು ನನಗೆ ಬೆಳಿಗ್ಗೆ ಸುದ್ದಿ ಬಂದಿತ್ತು, ಸಕ್ಕರೆ ಕಾರ್ಖಾನೆಗಳ ಸಿಸ್ಮಾದವರು ಸೊಲ್ಲಾಪುರದಲ್ಲಿ ಮತ್ತೆ ಒಂದು ಮೀಟಿಂಗ್ ಮಾಡುತ್ತಿದ್ದಾರೆಂದು. 10ನೇ ತಾರೀಕು 2500 ರೂ ಕೊಡಿಸುತ್ತೇವೆಂದು ಈ ಸರ್ಕಾರ ಘೋಷಣೆ ಮಾಡಿತು. ಆದರೆ ಇವತ್ತಿನವರೆಗೂ ಕಾರ್ಖಾನೆಗಳು ಪ್ರಾರಂಭವಾಗಲಿಲ್ಲ. ಮೊನ್ನೆ ಮೊನ್ನೆ ಪ್ರಾರಂಭವಾಗಿವೆ. ಈಗಲೂ ಪ್ರಾರಂಭವಾಗಿರುವ ಸಕ್ಕರೆ ಕಾರ್ಖಾನೆಗಳು ಯಾವ ರೈತರಿಂದ ಕಬ್ಬು ತೆಗೆದುಕೊಂಡಿದ್ದಾರೆಂದರೆ, ನಾನು 2,000 ರೂ. ಮಾತ್ರ ಕೇಳುತ್ತೇನೆ, ಅಥವಾ ನೀವು ಕೊಡುವ ಹಣವನ್ನು ತೆಗೆದುಕೊಳ್ಳುವುದಕ್ಕೆ ನಾನು ಒಪ್ಪಿಕೊಂಡಿದ್ದೇನೆ ಎನ್ನುವಂತಹ ಒಪ್ಪಿಗೆ ಪತ್ರಕ್ಕೆ ಯಾರು ಸಹಿ ಮಾಡಿದ್ದಾರೆ ಅವರ ಕಬ್ಬನ್ನು ಮಾತ್ರ ಕಾರ್ಖಾನೆಗೆ ತರಿಸಿ ಕೊಂಡಿದ್ದಾರೆ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. 2500 ರೂ. ಮೊದ ಲನೇ ಕಂತು ಆದರೆ ಮುಂದಿನ ಕಂತುಗಳನ್ನು ಯಾವ ರೀತಿ ನಿಗದಿ ಮಾಡು ತ್ತೀರಿ? ಈ ಎಲ್ಲಾ ಸ್ಪಷ್ಟತೆಗಳನ್ನು ಕಬ್ಬು ಬೆಳೆಗಾರರ ಪರವಾಗಿ ಕೇಳುತ್ತಿದ್ದೇನೆ.

ಸರ್ಕಾರ ಸ್ಪಷ್ಟೀಕರಣ ಕೊಡಬೇಕೆಂದು ಹೇಳುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಶ್ರೀ ವಿ.ಉಮೇಶ್ ಕತ್ತಿ (ಹುಕ್ಕೇರಿ) :- ಮಾನ್ಯ ಅಧ್ಯಕ್ಷರೆ, ರಾಜ್ಯದ ಕಬ್ಬು ಬೆಳೆಗಾರ ಕಳೆದ ಮೂರು – ನಾಲ್ಕು ತಿಂಗಳುಗಳಿಂದ ರಸ್ತೆಗೆ ಇಳಿದು ರೈತ ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಸಿಗಬೇಕು, ವಿಶೇಷವಾಗಿ ಕಬ್ಬುಗೆ ಉತ್ತಮವಾದ ಬೆಲೆ ಸಿಗಬೇಕೆಂದು ಹೋರಾಟ ಮಾಡುತ್ತಿರುವ ಸಂಗತಿ ಸರ್ಕಾರಕ್ಕೂ ಗೊತ್ತಿದೆ, ವಿರೋಧ ಪಕ್ಷದ ನಾಯಕರಿಗೂ ಗೊತ್ತಿದೆ, ಸಂಬಂಧ

ಪಟ್ಟ ಅಧಿಕಾರಿಗಳಿಗೂ ಗೊತ್ತಿದೆ. ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಹೊಸ ಕಾನೂನು ತಂದು ಕಬ್ಬು ಖರೀದಿ ಮತ್ತು ನಿಯಂತ್ರಣ ಮಂಡಳಿ ರಚನೆ ಮಾಡಿ ಅದಕ್ಕೆ ಯಾರು ಅಧ್ಯಕ್ಷರಿರಬೇಕು, ಉಪಾಧ್ಯಕ್ಷರಿರಬೇಕು, ಕಬ್ಬು ಬೆಳೆಗಾರರು ಎಷ್ಟು ಇರಬೇಕು, ಕಾರ್ಖಾನೆ ಮಾಲೀಕರು ಎಷ್ಟು ಇರಬೇಕು, ಸಹಕಾರಿ ಸಂಘದವರು ಎಷ್ಟು ಜನ ಸದಸ್ಯರಿರಬೇಕು ಎಂದು ನಿರ್ಧಾರ ಮಾಡಿ ಒಂದು ಕಮಿಟಿ ಮಾಡಿತ್ತು, ಚುನಾವಣೆ ನಡೆದ ಮೇಲೆ ನಮ್ಮ ಸರ್ಕಾರ ಅಧಿಕಾರ ಕಳೆದುಕೊಂಡು ಮೇ 15ಕ್ಕೆ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿತು. ಹೊಸ ಸರ್ಕಾರ ಬಂದ ಖುಷಿಯಲ್ಲಿ ಕಬ್ಬು ಬೆಳೆಗಾರರು ಮತ್ತು ಇನ್ನಿತರ ಬೆಳೆ ಬೆಳೆಯುವಂತಹ ರೈತರನ್ನೂ ಮರೆತರು. ಅದರ ಪರಿಣಾಮ ಇವತ್ತು ಇಲ್ಲಿಗೆ ಬಂದು ಮುಟ್ಟಿದೆ. ಮಾನ್ಯ ಉಪಾಧ್ಯಕ್ಷರೆ, ಇವತ್ತು ಸಕ್ಕರೆ ಬೆಲೆ ಕುಸಿತ ಆಗಲಿಕ್ಕೆ, ರೈತರು ಬೀದಿಗಿಳಿಯುವುದಕ್ಕೆ ಕಾರಣ ಯಾರು? ಸ್ವಾತಂತ್ರ್ಯ ಸಿಕ್ಕು ಅಲ್ಲಿಂದ ಇಲ್ಲಿಯವರೆಗೆ ಸಕ್ಕರೆ ಬೆಲೆ ನಿಗಧಿ ಮಾಡುವುದು, ಬೆಳೆದಂತಹ ಬೆಳೆ, ಸಕ್ಕರೆ ನಿಯಂತ್ರಣಮಾಡುವುದು ಕೇಂದ್ರ ಸರ್ಕಾರದ ಹತೋಟಿಯಲ್ಲಿದೆ ಕಳೆದ ವರ್ಷದವರೆಗೆ ಏನು ಸಕ್ಕರೆ ಉತ್ಪಾದನೆ ಮಾಡಿದರು, ಪ್ರತಿ ತಿಂಗಳು consumption ಗೆ, ಎಷ್ಟು ಬೇಕು? ಹೊರಗಡೆಯಿಂದ ಎಷ್ಟು ತರಿಸಬೇಕು ಎನ್ನುವ ತೀರ್ಮಾನವನ್ನು ಕೇಂದ್ರ ಸರ್ಕಾರದವರು ಮಾಡುತ್ತಾರೆ. ಆದರೆ ಕಳೆದ ವರ್ಷ ರಂಗರಜನ್ ವರದಿ ಕೊಟ್ಟ ಮೇಲೆ ಕೇಂದ್ರ ಸರ್ಕಾರದವರು ಕಬ್ಬು ಮುಕ್ತ ಮಾರುಕಟ್ಟೆಗೆ ಹೋಗುವಂತೆ ತೀರ್ಮಾನ ಮಾಡಿ ಸಕ್ಕರೆಯನ್ನು decontrol ಮಾಡಿ ಯಾರಾದರೂ ಏನಾದರೂ ಎಲ್ಲಾದರೂ ಮಾಡಿಕೊಳ್ಳಬಹುದು ಎನ್ನುವಷ್ಟರ ಮಟ್ಟಕ್ಕೆ ತಂದು ಮುಟ್ಟಿಸಿದ ಪರಿಣಾಮ ಇವತ್ತು ಸಕ್ಕರೆ ಕಾರ್ಖಾನೆಗಳವರು ಹಾಗೂ ರೈತರು ಬೀದಿಗಿಳಿದು ಹೋರಾಟ ಮಾಡುವಂತಹ ಪರಿಸ್ಥಿತಿ ಉದ್ಭವವಾಗಿದೆ. ಇವತ್ತು ಒಂದು ಕಡೆ decontrol, ಇನ್ನೊಂದು ಕಡೆ ಬರತಕ್ಕಂತಹ ಲೋಕಸಭಾ ಚುನಾವಣೆ ಇವೆರಡನ್ನೂ ಗಮನದಲ್ಲಿಟ್ಟುಕೊಂಡು ಆಮ್ ಆದ್ಮಿ ಬಡವರಿಗೆ ಸಕ್ಕರೆ ತುಟ್ಟಿ ಆಗಬಾರದು, ಈರುಳ್ಳಿ ತುಟ್ಟಿ ಆಗಬಾರದು, ಗೋಧಿ ತುಟ್ಟಿ ಆಗಬಾರದು ಎನ್ನುವ ದೃಷ್ಟಿಯಲ್ಲಿ ಚುನಾವಣೆ ಬಂದ ಸಂದರ್ಭದಲ್ಲಿ ಸರ್ಕಾರಗಳು ತೀರ್ಮಾನ ಮಾಡಿ 20 ಲಕ್ಷ

ಟನ್ ಸಕ್ಕರೆಯನ್ನು ಆಮದು ಮಾಡಿಕೊಂಡರು, ಕಳೆದ ವರ್ಷದ carry over 80 ಲಕ್ಷ ಟನ್, 20 ಲಕ್ಷ ಟನ್ ಹೊರದೇಶದಿಂದ ಸಕ್ಕರೆ ತಂದು ಇವತ್ತು ದೇಶದಲ್ಲಿ ಹೋದ ವರ್ಷದ carry over ಮತ್ತು ಆಮದು ಸಕ್ಕರೆ ಸೇರಿ ಇವತ್ತು ನೂರು ಲಕ್ಷ ಟನ್ ಅಷ್ಟು ದಾಸ್ತಾನು ಕಾರ್ಖಾನೆಗಲಲ್ಲಿರುವ ಉದಾಹರಣೆಗಳು ಇವೆ ಈ ಸಂದರ್ಭದಲ್ಲಿ ಹೊಸ ಸರ್ಕಾರದ ಹೊಸ ಮಂತ್ರಿಗಳು ಬೆಳಗಾವಿ ಜಿಲ್ಲೆಯ ಅತೀ ದೊಡ್ಡ ಕಬ್ಬು ಬೆಳೆಗಾರರು. 1150 ಎಕರೆ ಪ್ರದೇಶ ದಲ್ಲಿ ಅತಿ ಹೆಚ್ಚು ಕಬ್ಬನ್ನು ಬೆಳೆಯುವವರು ಮಂತ್ರಿಯಾಗಿದ್ದಾರೆಂದು ಮಾನ್ಯ ಸದಸ್ಯರಾದ ಲಕ್ಷ್ಮಣ ಸವದಿಯವರು ಹಾಡಿ ಹೊಗಳಿದರು. ಒಬ್ಬ ಮಂತ್ರಿ ಹೇಗಿರಬೇಕೆಂದು ಚೆನ್ನಾಗಿ ಹಾಡಿ ಹೊಗಳಿ ನಮ್ಮ ಸಕ್ಕರೆ ಸಚಿವರು ಪ್ರಮಾಣ ವಚನ ಸ್ವೀಕರಿಸಿದಾಗ ನಾವೆಲ್ಲಾ ಸಂತೋಷ ಪಟ್ಟೆವು. ಆ ಸಂದರ್ಭದಲ್ಲಿ SAP meetıng ಜನವರಿ ತಿಂಗಳಲ್ಲಿ ಕರೆಯಬೇಕಾಗಿತ್ತು, ಜನವರಿಯಲ್ಲಿ ಕರೆಯದೆ ಮೊನ್ನೆ ಹೋದ ತಿಂಗಳು ಅಕ್ಟೋಬರ್ ತಿಂಗಳ ಅಂತ್ಯದಲ್ಲಿ ನವೆಂಬರ್ ತಿಂಗಳ ಮೊದಲನೇ ವಾರದಲ್ಲಿ ಸಭೆ ಕರೆದು ಯಾರು ಹೇಳಿದ್ದೂ ಕೇಳುವುದಕ್ಕೆ ತಯಾರಿಲ್ಲ. ತಜ್ಞರ ಸಮಿತಿ ಇಲ್ಲ, ಮಾನ್ಯ ಸದಸ್ಯರಾದ ಪಿ. ರಾಜೀವ್‌ರವರು ಮಾತನಾಡುವ ಸಂದರ್ಭದಲ್ಲಿ ಹೇಳಿದರು, ತಜ್ಞರ ಸಮಿತಿ ಇಲ್ಲ, ಆರ್ಥಿಕ ತಜ್ಞರ ಸಮಿತಿ ಇಲ್ಲ, ಕೃಷಿ ತಜ್ಞರ ಸಮಿತಿ ಇಲ್ಲ, ಕಬ್ಬು ಬೆಳೆಯುತಕ್ಕಂತಹ ಜಿಲ್ಲೆಯಿಂದ ಬಂದಂತಹ ಮಂತ್ರಿಗಳು, ಮೈಸೂರಿನ ರೇಷ್ಮೆ ನಾಡಿನಿಂದ ಬಂದಂತಹ ಸಹಕಾರ ಮಂತ್ರಿಗಳು, ಬೆಂಗಳೂರು ನಗರದ ನಮ್ಮ ಕೃಷಿ ಸಚಿವರು ಇವರೂ ಮೂರು ಜನ ಸೇರಿ ಸಭೆ ಕರೆದು ಬೆಳಿಗ್ಗೆಯಿಂದ ಸಂಜೆಯವರೆಗೆ ಆರು ಗಂಟೆಗಳ ಕಾಲ ಮೀಟಿಂಗ್ ಮಾಡಿ ಕಬ್ಬಿನ ಬೆಲೆ 2500 ರೂ. ದಕ್ಷಿಣ ಭಾಗದಲ್ಲಿ, 2500 ರೂ. ಉತ್ತರ ಭಾಗದಲ್ಲಿ ಕೊಡುವುದರ ಬಗ್ಗೆ ತೀರ್ಮಾನ ಮಾಡಿ ಘೋಷಣೆ ಮಾಡಿ ಹೊರಟು ಹೋದರು. ಇದರ ಪರಿಣಾಮ ಏನು? ಕಾರ್ಖಾನೆ ಮಾಲೀಕರು ಯಾರೂ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ತಯಾರಿಲ್ಲ, ಈಗ ನಿಗದಿ ಮಾಡಿರುವಷ್ಟನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಕಾರ್ಖಾನೆಯವರ ವಾದ. 3,000–3500 ರೂ. ಕೊಡಬೇಕೆಂದು ರೈತರ ವಾದ. ಇವೆರಡರ ಮಧ್ಯೆ ಇನ್ನೂ ಬಗೆಹರಿಯದ

ಕಗ್ಗಂಟಾಗಿ ಉಳಿದಿರಿವ ಈ ಕಾರ್ಯಕ್ರಮ ಇದನ್ನು ಬಗೆಹರಿಸುವುದು ಹೇಗೆ? ಪ್ರತಿ ವರ್ಷ ರೈತರು ಕಬ್ಬು ಬೆಳೆಯುತ್ತಾರೆ. 12-13 ವರ್ಷ ಆದ ಮೇಲೆ ಕಬ್ಬು ಕಡಿಯಲೇಬೇಕು. ಒಂದು ವರ್ಷ ನಾವು ಕಬ್ಬು ಕಡಿಯದೇ ಹಾಗಯೇ ಬಿಟ್ಟರೆ ಅದು ಹಾವು ಚೇಳು ಆಗಿ ತಿನ್ನುವುದಕ್ಕೆ ಬರುವುದಿಲ್ಲ. ಆ ಅನುಭವ ಮಾನ್ಯ ಪ್ರಕಾಶ್ ಹೆಕ್ಕೇರಿಯವರಿಗೆ ಸಾಕಷ್ಟು ಇದೆ ಎಂದು ನಾನು ಭಾವಿಸಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಇಂತಹ ಉದಾಹರಣೆಗಳು ಸಾಕಷ್ಟಿವೆ ಕಬ್ಬಿಗೆ ಬೆಂಬಲ ಬೆಲೆ ಘೋಷಣೆ ಮಾಡಬೇಕಾದರೆ ಅದಕ್ಕೆ ಮಾನದಂಡಗಳೇನು? ಮಾನ್ಯ ಮಂತ್ರಿ ಗಳಿಗೆ ಕೇಳುತ್ತೇನೆ ಅವರ ಮಾನದಂಡ, ಸಕ್ಕರೆ ಆಯುಕ್ತರು, ಕೈಗಾರಿಕೆ ಇಲಾಖೆಯ ಅಧಿಕಾರಿಗಳ ಮಾನದಂಡ ಏನು? ಏನಾದರೂ ಮಾಡಿ 2500 ರೂ. ಕೊಡುವ ಸಲುವಾಗಿ ಅವರ ಮಾನದಂಡ. 29 ರೂ.ಗಳಿಗೆ ಸಕ್ಕರೆ ಮಾರಾಟ ಆಗುತ್ತದೆ ಎಂದು ಅವರು ಮಾನದಂಡ ಇಟ್ಟುಕೊಂಡಿದ್ದಾರೆ. ಇವತ್ತು ಸಕ್ಕರೆ ದರ 26 ರೂ. ಇದೆ. ಒಂದು ಟನ್ ಕಬ್ಬಿನಿಂದ ಬರತಕ್ಕಂತಹ bagasse sugar process ಗೆ ಹೋಗುತ್ತದೆ. ಉಳಿದಂತಹ bagasse75 ಕಿಲೋ. ಇವರ ಮೂರು ಮಾನದಂಡಗಳ ಪ್ರಕಾರ ಶುಗರ್ ಆಯುಕ್ತರ ಪ್ರಕಾರ 150 ಕಿಲೋbagasse ಬರುತ್ತದೆ ಎಂದು ಹೇಳುತ್ತಾರೆ. ಅದರ ಪ್ರಕಾರ 100 ರೂ ಕಿಲೋ. 4500 ರೂ. Bagasse ನಿಂದ ಬರತಕ್ಕಂತಹ ಆದಾಯ. ಇದೇ ಸರ್ಕಾರದ ಇದೇ Power Ministry and KERC ಯವರು ತೀರ್ಮಾನ ಮಾಡಿದ್ದು bagasse per tonne ಗೆ 1200 ರೂ.ಗಳೆಂದು ಮಾಡಿದ್ದು. ಕಾರ್ಖಾನೆಯವರು ತೀರ್ಮಾನ ಮಾಡಿದ್ದು ಒಂದು ಟನ್‌ಗೆ 1500 ರೂ. ಗಳೆಂದು. ಆದರೆ ಮಂತ್ರಿಗಳು ಮತ್ತು ಅಧಿಕಾರಿಗಳು ಕೂಡಿ ಒಂದು ಕೆ.ಜಿ. bagasse 3 ರೂ.ಗಳೆಂದರೆ 450 ರೂ. ಗಳು bagass ನಿಂದ ಬರುತ್ತದೆ, ಅಂದರೆ 2900 ರೂ.ಗಳ ಸಕ್ಕರೆಯಿಂದ, 450 ರೂ.ಗಳು bagasse ನಿಂದ, ಇನ್ನು ಒಂದು ಟನ್ ಕಬ್ಬಿಗೆ ಕಾಕಂಬಿ ಎಷ್ಟು ಬರುತ್ತದೆಂದು ಕೃಷಿ ತಜ್ಞರನ್ನು ತಾವು ಕರೆದು ಕೇಳಿ. ಒಂದು ಟನ್ ಕಬ್ಬಿಗೆ 40 ಕಿಲೋ bagasse ಬರುತ್ತದೆ. ಆದರೆ ಇವರ ಲೆಕ್ಕದ ಪ್ರಕಾರ ಸರಿ ಹೊಂದದಿದ್ದರೆ ಅದನ್ನು 50 ಕೆ.ಜಿ. ಮಾಡಿಕೊಂಡು ಅದರಲ್ಲಿ 5 ಸಾವಿರ ರೂಪಾಯಿ ಟನ್‌ಗೆ ಹಿಡಿದರೂ 250

ರೂಪಾಯಿ ಮೊಲಾಸಿಸ್ನಿಂದ ಬರುತ್ತದೆ. ಈ ರೀತಿ ಲೆಕ್ಕವನ್ನು ಜೋಡಿಸಿದಾಗ 11% ಇಳುವರಿ ಬರುತ್ತದೆ ಒಟ್ಟಿನಲ್ಲಿ 3900 ರೂಪಾಯಿಯ ಆದಾಯ ಬರುತ್ತದೆ ಎಂದು ಹೇಳಿ ಅದರಲ್ಲಿ ಖರ್ಚವೆಚ್ಚವನ್ನು ತೆಗೆದು 2500 ರೂ.ಗಳನ್ನು ಕಬ್ಬಿಗೆ ಕೊಡಬೇಕು, 350 HLDಗೆ ಕೊಡಬೇಕು. ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಸಕ್ಕರೆ ಕಾರ್ಖಾನೆಗಳಿವೆ, ಸಾಕಷ್ಟು ರೈತರುಗಳು ಇದ್ದಾರೆ, ಕೃಷಿ ತಜ್ಞರಿದ್ದಾರೆ ಕಳೆದ ಐದು ವರ್ಷದ ಉದಾರಣೆಯನ್ನು ತೆಗೆದುಕೊಳ್ಳಿ. ಇವತ್ತು 5 ವರ್ಷದಲ್ಲಿ ಕಬ್ಬು ಕಟಾವು ಮತ್ತು transportation 500 ರೂ.ಗಳ ಒಳಗೆ ಎಲ್ಲಿಯೂ ಆಗುವುದಿಲ್ಲ. ಆರ್ಥಿಕ ತಜ್ಞರು ಮತ್ತು ಕೃಷಿ ತಜ್ಞರಿಂದ ಇದನ್ನು ತಿಳಿದುಕೊಳ್ಳಬಹುದು. ಆದರೆ ಇವರು ಏನು ಮಾಡಿದ್ದಾ ರೆಂದರೆ ಬರತಕ್ಕಂಥ ಚುನಾವಣೆಯನ್ನು ಮಾನದಂಡವನ್ನಾಗಿ ಇಟ್ಟುಕೊಂಡು 2500 ರೂ.ಗಳೆಂದು ಘೋಷಣೆ ಮಾಡುವುದಕ್ಕೆ ಹೋಗಿ ಈ ಕಡೆರೈತರು ಸಮಾಧಾನವಾಗಲಿಲ್ಲ, ಕಾರ್ಖಾನೆಯವರಿಗೂ ಸಮಾಧಾನವಾಗಿಲ್ಲ. ಸಮಸ್ಯೆ ಬಗೆಹರಿಯದ ಕಗ್ಗಂಟಾಗಿದೆ. ಯಾವುದೇ ಸರ್ಕಾರವಿರಲಿ ಜವಾಬ್ದಾರಿಯುತ ಮಂತ್ರಿ ನಾಲ್ಕು ಜನ ಕೃಷಿ ತಜ್ಞರನ್ನು ಮತ್ತು ಆರ್ಥಿಕ ತಜ್ಞರನ್ನು consult ಮಾಡಿ ಏನು ಮಾಡಿದರೆ ಸರಿಹೋಗುತ್ತದೆಂದು ಕೇಳಿದ್ದರೆ ಸರಿಯಾದ ಲೆಕ್ಕಚಾರದ ವಿವರಗಳು ಸಿಗುತ್ತಿತ್ತು. ಅದ್ಯಾವುದನ್ನೂ ಮಾಡದೇ ಈ ರೀತಿ ಘೋಷಣೆ ಮಾಡಿ ಇವತ್ತು ಕಾರ್ಖಾನೆಯವರಿಗೂ ತೊಂದರೆದಾಯಕವಾಗು ವಂತೆ, ಕಬ್ಬು ಬೆಳೆಗಾರರಿಗೂ ತೊಂದರೆಯಾಗುವಂತೆ ಸರ್ಕಾರವು ಬೇಜ ವಾಬ್ದಾರಿಯಿಂದ ತೀರ್ಮಾನ ಮಾಡಿದೆ. ಈ ರೀತಿ ಮಾಡಿ ಒಟ್ಟಾರೆ ರಾಜ್ಯದ ಕಬ್ಬು ಬೆಳೆಗಾರರನ್ನು ಬೀದಿ ಪಾಲು ಮಾಡುವಂಥಕಾರ್ಯಕ್ರಮವನ್ನು ಮಾಡಿ ಕೊಂಡಿದ್ದಾರೆ. ಮಾನ್ಯ ಉಪ ಸಭಾಧ್ಯಕ್ಷರೆ, ನಾನು ತಮ್ಮ ಮುಖೇನ ಮಾನ್ಯ ಮಂತ್ರಿಗಳಿಗೆ ಕೇಳಬಯಸುವುದೇನೆಂದರೆ, ತಾವೇನಾದರೂ ಚುನಾವಣೆಗಳನ್ನು ಮಾನದಂಡವನ್ನಾಗಿ ಇಟ್ಟುಕೊಂಡು ಕಬ್ಬಿನ ಬೆಲೆಯನ್ನು ತೀರ್ಮಾನ ಮಾಡಿ ದರೆ ಜನರು ಮುಂದಿನ ಚುನಾವಣೆಯಲ್ಲಿ ನಿಮಗೆ ಬುದ್ಧಿ ಕಲಿಸುತ್ತಾರೆ. ಆ ರೀತಿ ಮಾಡಬೇಡಿ. ಕಬ್ಬು ಬೆಳೆಗಾರರ ಜೊತೆ ಚೆಲ್ಲಾಟವಾಡಬೇಡಿ. ರಾಜ್ಯ ಸರ್ಕಾರ ಇವತ್ತು ಏನೋ ಒಂದು ತೀರ್ಮಾನ ತೆಗೆದುಕೊಂಡಿದೆ ಇದನ್ನು

ಸರಿಪಡಿಸುವುದು ಹೇಗೆ? ಇದಕ್ಕೆ ಏನಾದರೂ ಒಂದು ರೀತಿಯಲ್ಲಿ ಲೆಕ್ಕಾಚಾರ ವನ್ನು ಮಾಡಬೇಕಲ್ಲ ಇವತ್ತು ಒಂದು ಟನ್ ಕಬ್ಬಿನಿಂದ ಕೇಂದ್ರ ಸರ್ಕಾರಕ್ಕೆ 130 ರೂ.ಗಳ ತೆರಿಗೆ ಹೋಗುತ್ತದೆ. ಒಂದು ಕ್ವಿಂಟಲ್ ಸಕ್ಕರೆ ಮೇಲೆ 98 ರೂಪಾಯಿಗಳು ಕೇಂದ್ರ ಸರ್ಕಾರದ ಅಬಕಾರಿ ಸುಂಕ, ಒಂದು ಕೆ.ಜಿ. ಮೊಲಾಸಿಸ್ ಮೇಲೆ 75 ಪೈಸೆ ಕೇಂದ್ರ ಸರ್ಕಾರಕ್ಕೆ ಟ್ಯಾಕ್ಸ್ ಹೋಗುತ್ತದೆ. ರಾಜ್ಯ ಸರ್ಕಾರ ಕೂಡ purchase Tax ತೆಗೆದು ರೈತರಿಗೆ ಉಪಕಾರ ಮಾಡಿದ್ದಾರೆ. ಮಾನ್ಯ ಸಚಿವರು ಹೇಳಿದ್ದಾರೆ purchase Tax ಅನ್ನು ತೆಗೆದುಹಾಕುತ್ತೇವೆ. Sugar Tax ಅನ್ನು ತೆಗೆದುಹಾಕುತ್ತೇವೆಂದು ಹೇಳಿ ಇವೆರಡರಿಂದ 60 ರೂಪಾಯಿ ಟ್ಯಾಕ್ಸ್ ತೆಗೆದುಹಾಕುತ್ತೇವೆಂದು ಹೇಳಿದ್ದಾರೆ. ಇನ್ನೂ VATಅನ್ನು ಕೂಡ ತೆಗೆದುಹಾಕುತ್ತೇವೆಂದಿದ್ದಾರೆ ಈ ಮೊದಲು VAT ಹಾಕಿದವರು ಇವರೇ, ತದನಂತರದಲ್ಲಿ ಮೂರು ತಿಂಗಳಲ್ಲಿ VAT ಅನ್ನು ತೆಗೆದವರು ಇವರೇ. ಯಾರೂ ಕೂಡ ಇವರಿಗೆ VAT ಹಾಕಿ ಎಂದು ಹೇಳಲಿಲ್ಲ, ತೆಗೆಯಿರಿ ಎಂದು ಕೂಡ ಹೇಳಲಿಲ್ಲ. ನಾವು ಈ ಮೊದಲೇ ಇವರು VAT ಹಾಕಿದಾಗ ರೈತರಿಗೆ ತೊಂದರೆಯಾಗುತ್ತದೆ, ಪಕ್ಕದ ಮಹಾರಾಷ್ಟ್ರಕ್ಕೆ ಕಬ್ಬು ಹೋಗುತ್ತದೆ, ರೈತರಿಗೆ ತೊಂದರೆಯಾಗುತ್ತದೆಂದು ಹೇಳಿದಾಗ ಆಗ ಇವರಿಗೆ ಇದು ಗಮನಕ್ಕೆ ಬರಲಿಲ್ಲ. ಆದರೆ ಈಗ ಕಬ್ಬಿನ ಬೆಲೆ ತೀರ್ಮಾನ ಮಾಡುವಾಗ VAT ಕಿತ್ತುಹಾಕುತ್ತಾರೆ. ಕಬ್ಬಿನ ಬೆಲೆ ನಿಗದಿ ಮಾಡುವಾಗ 80 ರೂ.ಗಳ ತೆರಿಗೆ ತೆಗೆದು ಮಾಡಿರುವುದೇ ರೈತರಿಗೆ ಮಾಡಿದ ದೊಡ್ಡ ಉಪಕಾರವಾಗಿದೆ. ನಾನು ಒಂದು ವಿಚಾರವನ್ನು ಕೇಳಬಯಸುತ್ತೇನೆ, ಈ ರಾಜ್ಯದಲ್ಲಿ ಕಬ್ಬು ಬೆಳೆಗಾರರು ಕಬ್ಬು ಬೆಳೆಯದೇ ಇದ್ದರೆ ಸರ್ಕಾರದ ಅಬಕಾರಿ ಕಾರ್ಯಕ್ರಮ ನಿಂತು ಹೋಗುತ್ತಿತ್ತು. ಇವತ್ತು ಕರ್ನಾಟಕ ರಾಜ್ಯದಲ್ಲಿ ಒಟ್ಟು 5 ಕೋಟಿ ಟನ್ ಕಬ್ಬನ್ನು ಬೆಳೆಯುವುದು. ಒಂದು ಕೋಟಿ ಟನ್ ಕಬ್ಬನ್ನು ಬೆಳೆಯುವುದು. ಒಂದು ಕೋಟಿ ಟನ್ ಬೆಲ್ಲ ಮತ್ತು ಬೀಜಕ್ಕೆ ಹೋಗುತ್ತದೆ. ಬೀಜ ಮತ್ತೆ ಪ್ಲಾಂಟೇಷನ್ ಮಾಡುವುದಕ್ಕೆ ಹೋಗುತ್ತದೆ. 4 ಕೋಟಿ ಟನ್ ಕಬ್ಬು ಸಕ್ಕರೆ ಕಾರ್ಖಾನೆಗಳಿಗೆ ಹೋಗುತ್ತದೆ. ಮಂಡ್ಯ, ಹಾಸನ್, ಬೀದರ್, ಬಾಗಲಕೋಟೆ ಹೀಗೆ ಈ ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಕಬ್ಬನ್ನು ಬೆಳೆಯಲಾಗುತ್ತದೆ. 4 ಕೋಟಿ ಕಬ್ಬನ್ನು ಅರೆದು

ಹತ್ತು ಲಕ್ಷ ಟನ್ ಮೊಲ್ಯಾಸಿಸ್ನ್ನು ಉತ್ಪಾದನೆ ಮಾಡಲಾಗುತ್ತದೆ. ಒಂದು ಟನ್ ಮೊಲಸಿಸ್ ಮೇಲೆ ಇವತ್ತುಗಳಿಸತಕ್ಕಂಥ ಆದಾಯ 32,500 ರೂ.ಗಳು. ಒಂದು ಟನ್ ಮೊಲ್ಯಾಸಿಸ್‌ನಿಂದ ಅವರುಗಳಿಸುವಂಥ ಆದಾಯ, ಹತ್ತು ಟನ್ ಕಬ್ಬಿನಿಂದ 32500 ರೂ.ಗಳ ಆದಾಯ ಮೊಲ್ಯಾಸಿಸ್‌ನಿಂದ ಬರುತ್ತದೆ ನಾನು ರೈತರ ಪರವಾಗಿ ಒಂದು ವಿನಂತಿಯನ್ನು ಮಾಡುತ್ತೇನೆ, ಹಿಂದೆಂದೂ ಕಬ್ಬು ಬೆಳೆಯುವ ರೈತರು ತಮಗಾಗಿ ಈ ಸರ್ಕಾರಗಳ ಮುಂದೆ ಎಂದೂ ಕೈಚಾಚಿಲ್ಲ. ಇಂದು ಸರ್ಕಾರದ ತಪ್ಪು ನೀತಿಯಿಂದ, ಕೇಂದ್ರ ಸರ್ಕಾರದ ತಪ್ಪು ನೀತಿಯಿಂದ ರೈತರು ಇಂದು ಬೀದಿಗೆ ಮೊದಲ ಬಾರಿಗೆ ಬಂದಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಅಬಕಾರಿ ತೆರಿಗೆಯಲ್ಲಿ ಒಂದು ಟನ್ ಕಬ್ಬಿನಿಂದ 3750 ರೂ.ಗಳನ್ನು ಏನು ತೆಗೆದುಕೊಳ್ಳುತ್ತಿದೆಯೋ ಅದರಿಂದ 1000 ರೂ.ಗಳನ್ನು ಒಂದು ಟನ್ ಕಬ್ಬಿಗೆ ಬೆಂಬಲ ಬೆಲೆಯಾಗಿ ಘೋಷಣೆ ಮಾಡಿ, ಕಳೆದ 5 ವರ್ಷದ ಸರ್ಕಾರದಲ್ಲಿ ನಾನು ಕೃಷಿ ಸಚಿವನಾಗಿ ಕೆಲಸವನ್ನು ಮಾಡುವುದನ್ನು ಮಾಡಿದ್ದೇನೆ. ಈ ರಾಜ್ಯದ ರೈತರು ಬೆಳೆದಂಥ ತೊಗರಿಯಾಗಿರಬಹುದು, ಭತ್ತವಾಗಿರಬಹುದು, ಈರುಳ್ಳಿಯಾಗಿರಬಹುದು, ಗೋವಿನ ಜೋಳವಾಗಿರಬಹುದು, ನಾಲ್ಕು ವರ್ಷಗಳ ಕಾಲ ನಾನು ಕೃಷಿ ಸಚಿವನಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ ನಿಗದಿ ಮಾಡಿದ ಬೆಲೆಯ ಜೊತೆ ರಾಜ್ಯ ಸರ್ಕಾರ 200 ರೂ. 300 ರೂ. ಗಳಂತೆ ಭತ್ತಕ್ಕೆ, ಗೋವಿನ ಜೋಳಕ್ಕೆ, ತೊಗರಿಗೆ ಬೆಂಬಲ ಬೆಲೆಯಾಗಿ ಹೆಚ್ಚುವರಿಯಾಗಿ ಕೊಟ್ಟಂಥ ಉದಾರಣೆಗಳಿವೆಂದು ತಮಗೆ ಹೇಳಬಯಸುತ್ತೇನೆ. ಸರ್ಕಾರದಲ್ಲಿ ನನ್ನ ವಿನಂತಿಯಿಷ್ಟೇ. ಉತ್ತರ ಕರ್ನಾಟಕದ ರೈತ, ವಿಶೇಷವಾಗಿ ಕಬ್ಬು ಬೆಳೆಯತಕ್ಕಂಥ ಭಾಗದ ರೈತರು ಉತ್ತರ ಕರ್ನಾಟಕದಲ್ಲಿ ಹೆಚ್ಚಿರುವುದು. ಹಿಂದೆ ಎಂದೂ ಕೂಡ ಇಲ್ಲಿಯ ರೈತರು ಸರ್ಕಾರದ ಸಹಾಯಕ್ಕಾಗಿ ಕೈಚಾಚಿರುವುದನ್ನು ಜೀವಮಾನದಲ್ಲಿ ನೋಡಿಲ್ಲ. ಇವತ್ತು ಕೊಡ ಕೈಚಾಚುವುದಿಲ್ಲ. ಅವರು ಹೋರಾಟಕ್ಕೆ ಇಳಿದಿದ್ದಾರೆ ಈ ಸಂದರ್ಭದಲ್ಲಿ ಸರ್ಕಾರ ಎಚ್ಚೆತ್ತುಕೊಂಡ ಏನು ತಾವು ಅಬಕಾರಿ ಇಲಾಖೆಯಿಂದ 13 ಸಾವಿರ ಕೋಟಿ ರೂ.ಗಳ ಆದಾಯ ಬರುತ್ತಿದೆಯೋ ಅದರಲ್ಲಿ 4 ಸಾವಿರ ಕೋಟಿ ರೂ.ಗಳನ್ನು ರೈತರ ಪರವಾಗಿ

ಮೀಸಲಾಗಿಡಿ. ಹಿಂದೆ ಜಗದೀಶ್ ಶೆಟ್ಟರ್‌ರವರ ಸರ್ಕಾರ ವಿದ್ದಾಗ 3 ವರ್ಷಗಳ ಕಾಲ ಬರಗಾಲವಿದ್ದಾಗ ಮಾಡಿ ತೋರಿಸಿದೆ, ಸಿದ್ದರಾಮಯ್ಯನವರೆ ತಾವು ರೈತ ಪರ ಹೋರಾಟಗಾರರು ಎಂದು ಕೇವಲ ಭಾಷಣದಲ್ಲಿ ಹೇಳಿದರೆ ಆಗುವುದಿಲ್ಲ. ಇಂಥ ಸಂದರ್ಭದಲ್ಲಿ ಒಂದು ಸಾವಿರ ಕೋಟಿಯಷ್ಟು ಕಬ್ಬು ಬೆಳೆಗಾರರಿಗೆ ಒಂದು ಟನ್ ಕಬ್ಬಿಗೆ 1 ಸಾವಿರ ರೂ.ಗಳಂತೆ ಬೆಂಬಲ ಬೆಲೆಯನ್ನು ಘೋಷಣೆಯನ್ನು ಮಾಡಬೇಕು. ಸಕ್ಕರೆ ಕಾರ್ಖಾನೆಗಳನ್ನು ಹತೋಟಿಗೆ ತೆಗೆದುಕೊಳ್ಳಿ. ಯಾರೂ ನೀವು ಹೇಳಿದ ರೇಟನ್ನು ಕೊಡುವುದಿಲ್ಲ. ಅವುಗಳನ್ನು ನಿಮ್ಮ ಹತೋಟಿ ತೆಗೆದುಕೊಳ್ಳಿ, ನೀವು ನಡೆಸಿ. ರೈತರಿಗೆ ನೀವು revenue sharing ಆಧಾರದ ಮೇಲೆ ಬರತಕ್ಕಂಥ ಆದಾಯದಲ್ಲಿ ಏನು ರೆವಿನ್ಯೂ ಕಾರ್ಖಾನೆಗಳಿಗೆ ಕೊಡಬೇಕು, ಏನು ರೆವಿನ್ಯೂ ರೈತರಿಗೆ ಹೋಗಬೇಕು ಎಂಬ ಬಗ್ಗೆ ತೀರ್ಮಾನವನ್ನು ತಾವು ಮಾಡಿ. ನಾನು ಕಾರ್ಖಾನೆಯ ಮಾಲೀಕನೂ ಹೌದು, ಒಬ್ಬ ಕಬ್ಬು ಬೆಳೆಗಾರನೂ ಹೌದು, ಒಬ್ಬ ಜನಪ್ರತಿನಿಧಿಯೂ ಹೌದು, ಇಲ್ಲಿ ಕುಳಿತಿರುವ ಕೆಲವು ಸದಸ್ಯರಲ್ಲಿ ನನ್ನ ಬಗ್ಗೆ ಈ ಭಾವನೆಯಿಂದ. ಉಮೇಶ್ ಕತ್ತಿ ಕಾರ್ಖಾನೆ ಮಾಲೀಕ, ಕಾರ್ಖಾನೆ ಮಾಲೀಕ ಎಂಬುದಿದೆ. ಹೌದು, ಉದ್ಯೋಗ ಮಾಡುವುದಕ್ಕೆ ಒಂದು ಸಕ್ಕರೆ ಕಾರ್ಖಾನೆಯಿಂದ. ಆದರೆ ನಿಮ್ಮ ನೀತಿಯಿಂದ, ಕೇಂದ್ರ ಸರ್ಕಾರದ ನೀತಿಯಿಂದ ಇವತ್ತು ಈ ಕಾರ್ಖಾನೆಯೇ ಬೇಡ. ಪರ್ಮನೆಂಟ್ ಆಗಿ ಬೇಕಾದರೆ ಕಾರ್ಖಾನೆಯನ್ನು ಕೊಟ್ಟಬಿಡುತ್ತೇನೆ. ನನ್ನದೇನೂ ತಕರಾರಿಲ್ಲ ಏಕೆಂದರೆ ಇವತ್ತು ಈ ಕಾರ್ಖಾನೆಗಳನ್ನು ಇಟ್ಟುಕೊಂಡರೂ ಕೂಡ ಯಾವುದೇ ಉಪಯೋಗವಿಲ್ಲ. ಮಾನ್ಯ ಲಕ್ಷ್ಮಣ ಸವದಿಯವರು ಹೇಳಿದ ಹಾಗೆ ಯಾವ ಮಾಲೀಕರೂ ನಿಗದಿ ಮಾಡಿದ ದರವನ್ನು ಕೊಡುವುದಿಲ್ಲ ಅಲ್ಲಿ ಮುಟ್ಟುಗೋಲು ಮಾಡಿ, ಕಾರ್ಖಾನೆಯ ಕಬ್ಜಾ ತೆಗೆದುಕೊಳ್ಳಿ. ಈ ರಾಜ್ಯದಲ್ಲಿ ಒಟ್ಟು 57 ಸಕ್ಕರೆ ಕಾರ್ಖಾನೆಗಳಿವೆ. 57 ಸಕ್ಕರೆ ಕಾರ್ಖಾನೆಗಳು ಸಹಕಾರಿ ರಂಗದಲ್ಲಿ ಉಳಿದುಕೊಂಡಿವೆ. ಮಾನ್ಯ ಲಕ್ಷ್ಮಣ ಸವದಿಯವರು ಹೇಳಿದ ಹಾಗೆ ಅವುಗಳನ್ನೇ ಮಾನದಂಡವನ್ನಾಗಿ ಇಟ್ಟುಕೊಂಡು ಮಡಿದರೂ ಒಳ್ಳಯದೇ, ಈಗಾಗಲೇ 45 ಸಕ್ಕರೆ ಕಾರ್ಖಾನೆಗಳು ಪ್ರೈವೇಟ್ ಸೆಕ್ಟರ್‌ನಲ್ಲಿವೆ. ಈ

ಭಾಗದಲ್ಲಿ ಕುಳಿತಂಥ ನಾನಾಗಿರಬಹುದು, ಲಕ್ಷ್ಮಣ ಸವದಿಯಾಗಿರಬಹುದು, ಅಂದರೆ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಪಟ್ಟಂಥವರು, ಆ ಭಾಗದಲ್ಲಿ ಕುಳಿತಂಥ 4 ಜನ ಮಂತ್ರಿಗಳು, ಎಸ್.ಆರ್.ಪಾಟೀಲರು, ಹಿರಿಯರಾದ ಶಾಮನೂರು ಶಿವಶಂಕರಪ್ಪನವರು, ಸತೀಶ್ ಜಾರಕಿಹೊಳಿಯವರು, ಡಿ.ಬಿ. ಇನಾಂದಾರ್‌ರವರು, ಸಿದ್ದು ನ್ಯಾಮಗೌಡರವರು, ಹೀಗೆ ಅಲ್ಲಿಯೂ ಕೂಡ ಸ್ವಲ್ಪ ಸದಸ್ಯರುಗಳು ಕಾರ್ಖಾನೆ ಮಾಲೀಕರಾಗಿದ್ದಾರೆ. ಕಾನೂನು ಎಲ್ಲರಿಗೂ ಒಂದೇ, ಈ ಭಾಗದಲ್ಲಿ ನಾವಿದ್ದೇವೆ. ಆ ಭಾಗದಲ್ಲಿ ಅವರಿದ್ದಾರೆ. ಇವತ್ತು ಒಂದು ಟನ್ ಕಬ್ಬಿಗೆ 2500/- ರೂ.ಗಳೆಂದು ಘೋಷಣೆ ಮಾಡಿದ್ದರೂ ಕೂಡ, ಎಲ್ಲಾ ಕಾರ್ಖಾನೆಗಳವರು ರೂ.2000 ಕ್ಕಿಂತ ಹೆಚ್ಚು ಯಾರೂ ಕೊಡುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಇವತ್ತು decontrol ಆದ ಕಾರಣ ಸಕ್ಕರೆ ಬೆಲೆ 100 per cent ರೂ.ಗಳಿಗೆ ಹೋಗುತ್ತದೆ. ಕಳೆದ 20 ವರ್ಷದ carry over, import ಸಕ್ಕರೆ ಇರುವುದರಿಂದ ಸಕ್ಕರೆ ಬೆಲೆ ರೂ.20ರ ಮೇಲೆ ಹೋಗುವುದಿಲ್ಲವೆನ್ನುವ ಭಯ ಎಲ್ಲಾ ಸಕ್ಕರೆ ಕಾರ್ಖಾನೆ ಮಾಲೀಕರಲ್ಲಿ ಬಂದು 2 ಸಾವಿರ ರೂ. ಗಳಿಗಿಂತ ಹೆಚ್ಚು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿ, ಈ FRP ಏನಿದೆ ಅದನ್ನು ನಾವ್ಯಾರೂ ನಿಗದಿ ಮಾಡಿರುವುದಲ್ಲ ಈ FRPಯನ್ನು ಕೇಂದ್ರ ಸರ್ಕಾರ ನಿಗದಿ ಮಾಡಿರುವುದು. ಈ FRPಯನ್ನು ನಿಗದಿ ಮಾಡುವುದು ಕೇಂದ್ರ ಸರ್ಕಾರ. ಅದರ base price ಅದನ್ನು ಕೊಡುತ್ತಿದ್ದಾರೆ.

ನಾಳೆ molasses ನಿಂದ, ಕಬ್ಬಿನ ಸಿಪ್ಪೆಯಿಂದ, press mud ನಿಂದ ಮತ್ತು ಸಕ್ಕರೆಯಿಂದ ಬರುವಂತಹ ಆದಾಯವನ್ನು ಗಣನೆಗೆ ತೆಗೆದುಕೊಂಡು, ಮಾರಾಟ ಮಾಡಿ ಬಂದಮೇಲೆ, ಏನು ಆದಾಯ ಬಂದಿದೆ ಎಂದು revenuesharing ನಲ್ಲಿ ಹಂಚಿಕೆ ಮಾಡಿ, ಅದನ್ನು ಯಾರೂ ಕೂಡ ವಿರೋಧ ಮಾಡುವುದಿಲ್ಲ. ನೀವು ರೈತರಿಗೆ ಮತ್ತು ಫ್ಯಾಕ್ಟರಿಯವರಿಗೆ ಬೆಂಕಿ ಹಚ್ಚಿ ಮಜಾ ನೋಡುವುದಕ್ಕೆ ಕುಳಿತುಕೊಳ್ಳಬೇಡಿ. ಇವತ್ತಿನ ದಿನ ಪರಿಸ್ಥಿತಿ ಹಾಗಲ್ಲ. ಹಿಂದೆ ಒಂದು ಬಾರಿ ಈ ಪರಿಸ್ಥಿತಿ ಇತ್ತು ರಾಜ್ಯ ಸರ್ಕಾರ ಜವಾಬ್ದಾರಿ ವಹಿಸಿ ಒಂದು ಟನ್‌ಗೆ ಒಂದು ಸಾವಿರ ರೂಪಾಯಿ ಘೋಷಣೆ ಮಾಡಬೇಕು.

ಇಲ್ಲದಿದ್ದರೆ ಇನ್ನೂ ಇದು ಉಗ್ರ ರೂಪ ತಾಳುತ್ತದೆ. ಈ ಹೋರಾಟ ಆಗುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡುವಂತಹ ಪ್ರಸಂಗ ಬಂದರೂ ಬರಬಹುದು. ಮಾನ್ಯ ಪ್ರಕಾಶ್ ಹುಕ್ಕೇರಿಯವರೆ, ನೀವು ಅಲ್ಲಿಯವರೆಗೂ ಹೋಗಬೇಡಿ. ದಯಮಾಡಿ ಈ ಸಮಸ್ಯೆಯನ್ನು ಬಗೆಹರಿಸಿ ನೀವು ಒಂದು ಟನ್‌ಗೆ ಒಂದು ಸಾವಿರ ರೂಪಾಯಿ ಘೋಷಣೆ ಮಾಡಿ. ಸರಿಯಾದ ರೀತಿಯಲ್ಲಿ ಈ ವರ್ಷ ಕಬ್ಬನ್ನು crushing ಮಾಡಿ ಮುಗಿಸಿ. ಮುಂದಿನ ವರ್ಷ ಮುಂಚಿತವಾಗಿ ಸಭೆಗಳನ್ನು ಕರೆಯಿರಿ. ನೀವು ಗಲಾಟೆ ಮಾಡಿ ಕಬ್ಬಿನ ವಿಚಾರದಲ್ಲಿ ತೀರ್ಮಾನ ಮಾಡುವುದಕ್ಕೆ ಆಗಿಲ್ಲ. ಈ ರಾಜ್ಯದಲ್ಲಿ ರೈತರೆಲ್ಲರೂ ತಿಳಿವಳಿಕೆವುಳ್ಳವರಿದ್ದಾರೆ. ಕಬ್ಬು ಬೆಳೆಗಾರರು ಬುದ್ಧಿಯಿಲ್ಲದವರಿಲ್ಲ, hundred percent ರೈತರಿದ್ದಾರೆ. ಹಾಗಾಗಿ ಈ ತೀರ್ಮಾನಗಳನ್ನು ಮಾಡಿ. ಕಳೆದ ವರ್ಷದಲ್ಲಿ ಸಾಕಷ್ಟು ಕಾರ್ಖಾನೆಗಳಿಂದ ಬಾಕಿ ಬರುವುದಿದೆ. ಮಾನ್ಯ ಸಹಕಾರಿ ಮಂತ್ರಿಗಳಾದ ಮಹದೇವ ಪ್ರಸಾದ್‌ರವರು ಎಂಟು ಕೋಟಿ ರೂಪಾಯಿ ಕೊಟ್ಟರೆ ಬಾಕಿ ಎಲ್ಲಾ ಕೊಟ್ಟ ಹಾಗೆ ಆಯಿತು ಎಂದು ಹೇಳಿತ್ತಿದ್ದರು. ಸ್ವಾಮಿ, ಇವತ್ತಿನವರೆಗೂ 150 ಕೋಟಿ ರೂಪಾಯಿಯೊಳಗೆ ಬಾಕಿ ಇಲ್ಲ. ತಾವು ಲೆಕ್ಕ ಕೊಡಿ ಎಂದು ಹೇಳಿದರೆ ನಾನು ಲೆಕ್ಕ ಕೊಡುತ್ತೇನೆ. ನಿಮಗೆ ಮಾಹಿತಿ ನಿಮ್ಮ ಡಿ.ಸಿ. ಕೊಡುತ್ತಾರೋ, Sugar Director ಕೊಡುತ್ತಾರೋ ಗೊತ್ತಿಲ್ಲ. Bagasse 450 ರೂಪಾಯಿಗೆ ತೆಗೆದುಕೊಳ್ಳುತ್ತೇನೆಂದು ಹೇಳಿದರೆ ಪ್ರಕಾಶ್ ಹುಕ್ಕೇರಿಯವರಿಗೆ ಕೊಡುತ್ತೇವೆ. 29 ರೂಪಾಯಿಗೆ ಸಕ್ಕರೆ, 450 ರೂಪಾಯಿ, 5000 ರೂಪಾಯಿ molasses ತೆಗೆದುಕೊಳ್ಳುತ್ತೇವೆಂದು ಆಣೆ ಮಾಡಲಿ. ಅವರು ಮಾಡಿರುವ ಲೆಕ್ಕಪತ್ರಗಳ ಪ್ರಕಾರ ನಾವು ಆ ರೇಟ್‌ಗೆ ಕೊಡುವುದಕ್ಕೆ ತಯಾರಿದ್ದೇವೆ. ಆದರೆ ಅವರು ಆ ರೀತಿ ತಿಳಿದುಕೊಳ್ಳುವುದಿಲ್ಲ. ರೈತರಿಗೆ ಮತ್ತು ಫ್ಯಾಕ್ಟರಿಗೆ ಬೆಂಕಿ ಹಚ್ಚಿ, ಬಡಿದಾಟ ಹಚ್ಚಿ, ಇವರು ಘೋಷಣೆ ಮಾಡಿ ಮನೆಗೆ ಹೋಗುವವರು. ಇದು ಸರಿಯಾದ ನೀತಿಯಲ್ಲ. ಜವಾಬ್ದಾರಿಯುತ ಸರ್ಕಾರ ಮುಂದಾಗಿ ತೀರ್ಮಾನಗಳನ್ನು ಮಾಡಿ. ಬೇಗ ಫ್ಯಾಕ್ಟರಿಗಳನ್ನು ಕಬ್ಜಾ ತೆಗೆದುಕೊಳ್ಳಿ, ನೀವು ಫ್ಯಾಕ್ಟರಿಗಳನ್ನು ನಡೆಸಿ ನೋಡಿ. ರೈತರಿಗೆ ಒಳ್ಳೆಯ ಬೆಲೆ ಕೊಡಬೇಕು. ರೈತರ ಬೇಡಿಕೆ ತಪ್ಪಿಲ್ಲ.

ಕಳೆದ ನಾಲ್ಕು ವರ್ಷಗಳಲ್ಲಿ ಗೊಬ್ಬರದ ನೆಲೆ ನಾಲ್ಕು ಪಟ್ಟಾಗಿದೆ. 300 ರೂಪಾಯಿಗೆ ಸಿಗುವಂತಹ DAP ಇವತ್ತು 1200 ರೂಪಾಯಿ ಬೆಲೆ ಆಗಿದೆ. ನಾಲ್ಕು ವರ್ಷದ ಹಿಂದೆ 50 ರೂಪಾಯಿಗೆ ಸಿಗುವಂತಹ ಲೇಬರ್ ಇವತ್ತು 250 ರೂಪಾಯಿ ಆಗಿದೆ. ಕಳೆದ ಮೂರು ವರ್ಷಗಳಿಂದ ಮಳೆ ತೊಂದರೆ, ಕಬ್ಬಿಗೆ ರೋಗ, ಈ ಎಲ್ಲಾ ತೊಂದರೆಗಳಿಂದ ರೈತ ಕಬ್ಬು ಬೆಳೆದು, ಅವನು ಖುಷಿ ಪಡುವ ಸಂದರ್ಭದಲ್ಲಿ, ಆಮದು ನೀತಿ carry over system ಮತ್ತು ಈ ಸರ್ಕಾರಗಳ ತೀರ್ಮಾನ ಇವುಗಳಿಂದ ಮನನೊಂದು ಬೀದಿಗೆ ಇಳಿದಿದ್ದಾನೆ. ಈ ಹೋರಾಟ ಉಗ್ರವಾಗುತ್ತದೆ. ನಾನು ತಮಗೆ ಕಳಕಳಿಯ ವಿನಂತಿ ಮಾಡುತ್ತೇನೆ. ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದೆ. ಈ ಸಂದರ್ಭದಲ್ಲಿ ನೀವು ರೈತರ ಪರ ತೀರ್ಮಾನಗಳನ್ನು ತೆಗೆದುಕೊಳ್ಳಿ. ಅದಕ್ಕೆ ಬೇಕಾದಂತಹ ಸಲಹ ಸೂವನೆಗಳನ್ನು ಪಕ್ಷಾತೀತವಾಗಿ, ರಾಜಕೀಯವನ್ನು ಬಿಟ್ಟು ಎಲ್ಲಾ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ರೈತ ಬದುಕಬೇಕು, ಫ್ಯಾಕ್ಟರಿಗಳು ಬದುಕಬೇಕು. ಸರ್ಕಾರ ಜವಾಬ್ದಾರಿಯುತ ತೀರ್ಮಾನ ತೆಗೆದುಕೊಳ್ಳಬೇಕೆನ್ನುವ ಒಂದೇ ದೃಷ್ಟಿಯಿಂದ ನನ್ನ ಅನಿಸಿಕೆ ಯನ್ನು ಹೇಳಿದ್ದೇನೆ. ತಮ್ಮಲ್ಲಿ ನನ್ನದು ಇನ್ನೊಂದು ವಿನಂತಿ ಏನೆಂದರೆ ಈ ಸರ್ಕಾರ ಅಧಿಕಾರಿಗಳನ್ನು ಕೂರಿಸಿಕೊಂಡು ಏನೋ ಒಂದು ಲೆಕ್ಕ ಮಾಡ ಬೇಕೆಂದು ಲೆಕ್ಕ ಮಾಡುವುದಕ್ಕೆ ಹೋಗಬೇಡಿ. ನಿಮ್ಮ ವಿಶ್ವವಿದ್ಯಾಲಯಗಳಲ್ಲಿ ಕೃಷಿ ತಜ್ಞರಿದ್ದಾರೆ, ಸಾಕಷ್ಟು senior IAS officers ಇದ್ದಾರೆ. ಆರ್ಥಿಕ ತಜ್ಞರು ಸಾಕಷ್ಟು ಜನ ಇದ್ದಾರೆ, ಎಲ್ಲಾ ಕುಳಿತುಕೊಂಡು ಲೆಕ್ಕ ಮಾಡಿ ನೋಡಿ. ನಿಮ್ಮ ಮನಸ್ಸಿಗೆ ಬಂದ ಹಾಗೆ ಲೆಕ್ಕ ಮಾಡಿ ಏನೋ ಒಂದು ತೀರ್ಮಾನ ಮಾಡುವುದಕ್ಕೆ ಹೋಗಬೇಡಿ. ಮಾನ್ಯ ಅಧ್ಯಕ್ಷರೆ, ಇವತ್ತಿಗೂ ಮಹಾರಾಷ್ಟ್ರದಲ್ಲಿ ಒಂದು ಕಾರ್ಖಾನೆಯೂ ಪ್ರಾರಂಭವಾಗಿಲ್ಲ. ಅಲ್ಲಿನ ಮುಖ್ಯಮಂತ್ರಿಗಳು ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಿಲ್ಲ. ಅಲ್ಲಿಯೂ ಕೂಡ ಇದೇ ಗೊಂದಲವಾಗಿ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವು ದಕ್ಕೆ ಸಿದ್ಧರಿಲ್ಲ. ಅಲ್ಲಿಯೂ ಕೂಡ ಇದೇ ಗೊಂದಲವಾಗಿ ಯಾವುದೇ ತೀರ್ಮಾನ ತೆಗೆದುಕೊಳ್ಳದೇ ಪ್ರಧಾನ ಮಂತ್ರಿಗಳ ಹತ್ತಿರ ಹೋಗಬೇಕೆಂದು

ಅವರು ತೀರ್ಮಾನ ಮಾಡಿದ್ದಾರೆ. ಹಾಗಾಗಿ ಮಾನ್ಯ ಪ್ರಕಾಶ್ ಹುಕ್ಕೇರಿಯವರು ಪ್ರಧಾನ ಮಂತ್ರಿಗಳ ಹತ್ತಿರ ಹೊರಟಿದ್ದಾರೆ. ಇಡೀ ದೇಶದಲ್ಲಿ ಅತೀ ಹೆಚ್ಚು ಬೆಳೆಯತಕ್ಕಂಥ ರಾಜ್ಯ ಯಾವುದಾದರೂ ಇದ್ದರೆ, ಅದು ಉತ್ತರ ಪ್ರದೇಶ ಮಾನ್ಯ ಅಖಿಲೇಶ್‌ರವರು, 25ನೇ ತಾರೀಖು ಕಾರ್ಖಾನೆಗಳನ್ನು ಪ್ರಾರಂಭ ಮಾಡದಿದ್ದರೆ ಆಸ್ತಿ ಮುಟ್ಟುಗೋಲು ಹಾಕುತ್ತೇವೆಂದು ಮೊನ್ನೆ ನೋಟಿಸ್ ಕೊಟ್ಟಿದ್ದಾರೆ. ಅದಕ್ಕೆ ಎಲ್ಲಾ ಫ್ಯಾಕ್ಟರಿಯವರು unanimously ನಾವು ಫ್ಯಾಕ್ಟರಿ ಮಾಡುವುದಕ್ಕೆ ಆಗುವುದಿಲ್ಲ, ನೀವೇ ನಡೆಸಿ ಎಂದು ಫ್ಯಾಕ್ಟರಿ ಮಾಲೀಕರು ಒಂದು ಪತ್ರ ಬರೆದು ಕುಳಿತಿದ್ದಾರೆ. ಮಹಾರಾಷ್ಟ್ರದಲ್ಲಿ 200 ಸಹಕಾರ ಸಕ್ಕರೆ ಕಾರ್ಖಾನೆಗಳಲ್ಲಿ ಒಂದೂ ಚಾಲೂ ಆಗುತ್ತಿಲ್ಲ. ದಕ್ಷಿಣ ಭಾದತದಲ್ಲಿ ಅತೀ ಹೆಚ್ಚು ಕಬ್ಬು ಬೆಳೆಯತಕ್ಕಂಥ ರಾಜ್ಯ ಮಹಾರಾಷ್ಟ್ರ. ಅಲ್ಲಿ ಒಂದೂ ಕಾರ್ಖಾನೆ ಪ್ರಾರಂಭವಾಗಿಲ್ಲ. ಅಲ್ಲಿ ಬೆಲೆ ನಿಗದಿಯಾಗದೇ, ಅಲ್ಲಿನ ಮುಖ್ಯಮಂತ್ರಿಗಳು ಯಾವುದೇ ತೀರ್ಮಾನ ಕೈಗೊಳ್ಳುವುದಕ್ಕೆ ಸಿದ್ಧರಿಲ್ಲ. ಆದರೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಕಬ್ಬಿನ ಸುಪುತ್ರ ಹಾಗೂ ಸಕ್ಕರೆ ಮಂತ್ರಿಗಳು ಬೇಜವಾಬ್ದಾರಿ ತೀರ್ಮಾನಗಳನ್ನು ತೆಗೆದುಕೊಂಡು ಇವತ್ತು ರೈತರನ್ನು ಮತ್ತು ಕಾರ್ಖಾನೆಗಳನ್ನು ಬೀದಿಗೆ ಇಳಿಸಿದ್ದಾರೆ. ಇದನ್ನು ನಿಲ್ಲಿಸಬೇಕು ಮತ್ತು ಸರಿ ಯಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಸರ್ಕಾರ ಜವಾಬ್ದಾರಿಯುತವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು ಇವತ್ತು ಏನು ಉಗ್ರವಾದ ಹೋರಾಟ ನಡೆಯುತ್ತಿದೆ. ಅದಕ್ಕೆ ಸರ್ಕಾರ ರೈತರ ಬೆಂಬಲಕ್ಕೆ ನಿಲ್ಲಬೇಕು. ಸರ್ಕಾರ ರೈತರಿಗೆ ಒಂದು ಸಾವಿರ ರೂಪಾಯಿ ಬೆಂಬಲ ಬೆಲೆ ಘೋಷಣೆ ಮಾಡಬೇಕು. ರೈತ ಪುಕ್ಕಟೆ ಕೊಡಿ ಎಂದು ಕೇಳುತ್ತಿಲ್ಲ. ಕಬ್ಬಿನಿಂದ ಬರುವಂತಹ molasses, molasses ನಿಂದ ಬರುವಂತಹ spirit, spirit ನಿಂದ IML ಮೇಲೆ ಟ್ಯಾಕ್ಸ್ ಬರುತ್ತಿದೆ, ಅದು ಒಂದು ಟನ್ ಕಬ್ಬಿನಿಂದ 3,200 ರೂಪಾಯಿ ಟ್ಯಾಕ್ಸ್ ಏನು ಬರುತ್ತಿದೆ, ಅದರಲ್ಲಿ ಒಂದು ಸಾವಿರ ರೂಪಾಯಿ ರೈತರಿಗೆ ಸಿಗಬೇಕೆನ್ನುವ ನನ್ನ ವಾದವನ್ನು ನೋಡಿದ್ದೀರಿ. ಇಲ್ಲಿ ಹೋರಾಟ ಗಳು ಆಗುವುದಿಲ್ಲ. ಆದರೆ ಹೋರಾಟವನ್ನು ನೋಡಿದ್ದೀರಿ. ಇಲ್ಲಿ ಹೋರಾಟ ಗಳು ಆಗುವುದಿಲ್ಲ. ಆದರೆ ಹೋರಾಟಗಳು ಉಗ್ರ ರೂಪ ತಾಳಿದರೆ ಯಾವ

ಸರ್ಕಾರಗಳೂ ಮತ್ತು ಯಾವ ಜನಪ್ರನಿಧಿಗಳು ತಡೆಯುವುದಕ್ಕಾಗುವುದಿಲ್ಲ ಆ ರೀತಿ ಉಗ್ರ ಹೋರಾಟಗಳು ಆಗುತ್ತವೆ, ಆ ಮಟ್ಟಕ್ಕೆ ಇಳಿಯಬೇಡಿ ಎಂದು ಮನವಿಯನ್ನು ಮಾಡುತ್ತಾ, ನನಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶ ನೀಡಿದಂತಹ ಮಾನ್ಯ ಉಪಾಧ್ಯಕ್ಷರಿಗೆ ಹಾಗೂ ಮಾನ್ಯ ಮಂತ್ರಿಗಳಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಮೇಲುಕೋಟೆ) :- ಮಾನ್ಯ ಉಪಾಧ್ಯಕ್ಷರೆ, ಇಲ್ಲಿಯೇ ಸುಮಾರು ಅರ್ಧ ಜನ ಕಾರ್ಖಾನೆ ಮಾಲೀಕರಿದ್ದಾರೆ. ಎಲ್ಲಿಯೂ ಹೋಗಬೇಕಾದ ಅವಶ್ಯಕತೆ ಇಲ್ಲ. ಇವರು ಈ ಕಡೆ ಬಂದಾಗ ಹೀಗೆ ಮಾತ ನಾಡುತ್ತಾರೆ. ಅವರು ಆ ಕಡೆ ಹೋದಾಗ ಹಾಗೆ ಮಾತನಾಡುತ್ತಾರೆ. ಇಲ್ಲಿರು ವಂತಹ ಕಾರ್ಖಾನೆ ಮಾಲೀಕರೆಲಾ ಒಂದು ಕಡೆ ಸೇರಿ ತೀರ್ಮಾನ ಮಾಡಿ ದರೆ ಬಹಳ ಒಳ್ಳೆಯದು. 45 ಖಾಸಗಿ ಕಾರ್ಖಾನೆಗಳು ಏನಿದೆ ಇವರ ಮಾತನ್ನು ಇಡೀ ರಾಜ್ಯವೇ ಕೇಳುತ್ತದೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ ಹುಚ್ಚು ಬಿಡುವವರೆಗೂ ಮದುವೆ ಆಗುವುದಿಲ್ಲ, ಮದುವೆ ಆಗುವವರೆಗೂ ಹುಚ್ಚು ಬಿಡುವುದಿಲ್ಲವೆನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಇವರು ಏನು ಮಾಡಬೇಕು? ಇಡೀ ವ್ಯವಸ್ಥೆಯೇ ಏರುಪೇರಾಗಿದೆ. ಕಬ್ಬು ಜೀವನಾ ವಶ್ಯಕ ವಸ್ತು ಎಂದು ಘೋಷಣೆ ಮಾಡಿರುವುದೇ ಮೊದಲನೇ ತಪ್ಪು ತೀರ್ಮಾನ, ಸಕ್ಕರೆ ಯಾವತ್ತಿಗೂ ಕೂಡ ಜೀವನಾವಶ್ಯಕವಾದ ವಸ್ತು ಅಲ್ಲ. ಅಕ್ಕಿ, ರಾಗಿ, ಜೋಳ, ಗೋಧಿ ಮತ್ತು ಕೆಲವು ಕಾಳುಗಳು ಜೀವನಾವಶ್ಯಕವಾದ ವಸ್ತುಗಳು. ಇಡೀ ದೇಶದಲ್ಲಿ ಜನ ಸಕ್ಕರೆ ತಿನ್ನುವುದು 100 ಕೆ,ಜಿ,ಗೆ 10 ಕೆ,ಜಿ. ಮಾತ್ರ. ಇನ್ನೂ 90 ಕೆ.ಜಿ.ಪೂರ್ಣ ವ್ಯಾಪಾರಕ್ಕೆ ಹೋಗುತ್ತದೆ. ವ್ಯಾಪಾರಕ್ಕೆ ಹೋಗುವಂತಹ ಸಕ್ಕರೆಗೆ ಒಂದು ಬೆಲೆ ನೀತಿಯನ್ನು ಮಾಡಿದರೆ, ಊಟ ಮಾಡುವವರು consumer ಎನ್ನುವ ಭಾವನೆ ಏನಿದೆ, consumer ನೂರು ಕೆ.ಜಿ. ಆ ಸಮಿತಿಯಲ್ಲಿದ್ದೇನೆ. ರಂಗರಾಜನ್ ವರದಿ, Sharing formula ಎಲ್ಲಾ stady ಮಾಡಿದರೆ, ಇವತ್ತು ಸಕ್ಕರೆ ಬೆಲೆ ಎಲ್ಲಾ ಮಾಡಿದರೆ, ರಂಗರಾಜನ್ ವರದಿಗೆ ಕೈ ಹಾಕಿದರೆ ಇನ್ನೂ 250 ಅಥವಾ 300 ರೂಪಾಯಿ ಕಡಿಮೆ ಯಾಗುತ್ತದೆ. ಹಕ್ ವರದಿಯಾಗಬಹುದು, ರಂಗರಾಜನ್ ವರದಿಯಾಗಬ

ಹುದು, ಸ್ವಾಮಿನಾಥನ್ ವರದಿಯಾಗಬಹುದು, ಯಾವುದಾದರೂ ಆಗಿರಲಿ, ಸ್ಥಿರ ಬೆಲೆಯಿಲ್ಲದಿದ್ದರೆ ನೀತಿ-ನಿರೂಪಣೆ ಮಾಡುವುದಕ್ಕೆ ಸಾಧ್ಯವಿಲ್ಲ 35 ರೂಪಾಯಿಬೆಲೆ ಇದ್ದಂತಹ ಸಕ್ಕರೆ ರೂ.26, ರೂ.27, ರೂ.28 ಕ್ಕೆ ಹೋಗಿದೆ ಸಕ್ಕರೆಗೆ ನಿಜವಾದ ಸ್ಥಿರ ಬೆಲೆ ಇದ್ದರೆ ಮಾತ್ರ ಈ ಬೆಲೆಯನ್ನು ನಿಗದಿ ಮಾಡುವುದಕ್ಕೆ ಸಾಧ್ಯ. ಈಗ ಏನಾಗಿದೆ ಎಂದರೆ ಕಾರ್ಖಾನೆಗಳೂ ಪ್ರಾರಂಭ ವಾಗದೇ ಇರುವುದರಿಂದ ಸುಕ್ರೋಸ್ ಅಂಶ ಕಡಿಮೆ ಆಗುತ್ತಾ ಹೋಗುತ್ತಿದೆ. ಇದರಿಂದ ಕಾರ್ಖಾನೆಗೆ ಮತ್ತು ರೈತರಿಗೆ ಇಬ್ಬರಿಗೂ ನಷ್ಟವಾಗುತ್ತದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರ ಮಧ್ಯಪ್ರವೇಶ ಮಾಡಿ, ಮೊದಲು ಕಾರ್ಖಾನೆಗಳನ್ನು ಪ್ರಾರಂಭ ಮಾಡಿಸಿ. ಕಾರ್ಖಾನೆ ಮತ್ತು ರೈತರ ಮಧ್ಯವಿರುವಂತಹ ಸಮಗ್ರ ಸಮಸ್ಯೆಗಳನ್ನು ಅಧ್ಯಯನ ಮಾಡಿ ಯಾವುದಾದರೂ ಒಂದು ನೀತಿ ನಿರೂಪಣೆ ಮಾಡುವುದಕ್ಕೆ ಪ್ರಯತ್ನ ಮಾಡಿ ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಈಗಾಗಲೇ ಒಂದೂವರೆ ತಿಂಗಳಾಗಿರುವುದರಿಂದ ರೇಟ್ ಕಡಿಮೆಯಾಗಿದೆ. ನಾನೇ ನನ್ನ ಕಾರ್ಖಾನೆ ಪ್ರಾರಂಬವಾಗಲಿ ಎಂದು ಕಾದಿದ್ದಕ್ಕೆ, ಒಂದೂವರೆ ತಿಂಗಳು ತಡವಾಗಿದ್ದಕ್ಕೆ ನನಗೆ 30 ಟನ್ ಕಬ್ಬು ಕಡಿಮೆಯಾಯಿತು. ಆ 30 ಟನ್‌ಗೆ ಇವತ್ತಿನ ದರದಲ್ಲಿ 60 ಸಾವಿರ ರೂಪಾಯಿ ಆಗುತ್ತದೆ. Gluclose ಆದಮೇಲೆ sucrose, ಕಬ್ಬಿನಲ್ಲಿ ಸಕ್ಕರೆ ಅಂಶ ಕಡಿಮೆಯಾದ ಮೇಲೆ ಕಾರ್ಖಾನೆಗಳು ಉಳಿಯುವುದಿಲ್ಲ, ರೈತರು ಉಳಿದಿರುವಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಸರ್ಕಾರ ಒಂದು ಸಾವಿರ ರೂಪಾಯಿ ಬೆಂಬಲ ಬೆಲೆ ಘೋಷಣೆ ಮಾಡಬೇಕೆನ್ನುವುದಕ್ಕಿಂತಲೂ, ಸರ್ಕಾರ ಇವತ್ತು 25 ರೂಪಾಯಿ ನಮ್ಮಲ್ಲಿ Ex-gate ಎಂದು ನಮಗೆ declare ಮಾಡಿದರೆ, ಉತ್ತರ ಕರ್ನಾಟಕಕ್ಕೆ ex-field ಎಂದು ಮಾಡಿದ್ದಾರೆ. Recoveryಗೆ ಇಲ್ಲಿ 9.5 Recovery ಮಾಡಿದ್ದಾರೆ. 9.5 Recovery ಯಲ್ಲಿ ಈ ಕಡೆಯ 10-12 ಕಾರ್ಖಾನೆಗಳಲ್ಲಿ 2 ಕಾರ್ಖಾನೆಗಳಲ್ಲಿ ಮಾತ್ರ 9.5 Recovery ಇದೆ. ಉತ್ತರ ಕರ್ನಾಟಕದಲ್ಲಿ ಸುಮಾರು 30-40 ಕಾರ್ಖಾನೆಗಳು ಅಲ್ಲಿ ನಡೆದಂತಹ ಚರ್ಚೆಯಲ್ಲಿ 11 Recovery ಒಳಗೆ ಬರುವಂತಹ ಕಾರ್ಖಾನೆಗಳು. ಅದರೊಳಗೆ ಇನ್ನೂ 10-15 ಕಾರ್ಖಾನೆ 11 Recovery ಮೇಲೆ ಜಾಸ್ತಿ

ಯಾಗಿದೆ. ನಮ್ಮಲ್ಲಿ ಮಹಾಲಕ್ಷ್ಮಿ ಎನ್ನುವ ಒಂದು ತಳಿಯನ್ನು introduce ಮಾಡುವುದನ್ನು ನೋಡಿದರೆ, ಒಂದು ಟನ್ ಕಬ್ಬಿಗೆ 150 ಕೆ.ಜಿ.ಸಕ್ಕರೆ ಸಿಗುತ್ತದೆ. ಆದ್ದರಿಂದ ಈ ರೀತಿಯ ಎಲ್ಲಾ ಆಲೋಚನೆಗಳನ್ನು ಮಾಡಿ ನಾವು ಏನಾಗಿದ್ದೇವೆ? ಇಲ್ಲಿ ಈ ಕಡೆ ಇರುವವರು ಆಡಳಿತ ಮಾಡಿದ್ದೀರಿ, ಆ ಕಡೆ ಇರುವವರು ಆಡಳಿತ ಮಾಡಿದ್ದಿರಿ. ಆದರೆ ಇವತ್ತು ನಿಜವಾಗಿಯೂ ಕಬ್ಬು ಬೆಳೆಗಾರರ ಕನಿಷ್ಠ ರಕ್ಷಣೆ ಆಗಬೇಕೆಂದರೆ ಒಂದು ಟನ್‌ಗೆ ಐದು ಸಾವಿರ ರೂ ಗಳನ್ನು ಕೊಡಬೇಕು. ನಾನೇ ಒಬ್ಬ Head Clerk 60 ರೂ.ಗಳ ಸಂಬಳವಿದ್ದಾಗ, ಒಂದು ಟನ್ ಕಬ್ಬಿಗೆ 16 ರೂ.ಗಳಿಗೆ ಹೊಡೆದಿದ್ದೇನೆ. ಟನ್‌ಗೆ 16, 20 ರೂ.ಗಳೆಂದರೆ ಆ ಸಂಬಳ 300 ಪಟ್ಟು ಜಾಸ್ತಿಯಾಯಿತು. ಆದರೆ ನಮಗೆ ಎಷ್ಟು ಪಟ್ಟು ಜಾಸ್ತಿಯಾಯಿತು? ನಮಗೆ ಮೂರು ಪಟ್ಟು ಜಾಸ್ತಿಯಾಯಿತು, ಅವರಿಗೆ ಮೂರುನೂರು ಪಟ್ಟು ಜಾಸ್ತಿಯಾಯಿತು. ಈ ರೀತಿ ಇದ್ದಾಗ ಜೀವನ ನಡೆಸಲು ಹೇಗೆ ಸಾಧ್ಯ? ಅದರಿಂದ ಇದು ಏನಾಗಿದೆ ಅಂದರೆ cost of cultivation, cost of living ಜಾಸ್ತಿ ಆಗಿದೆ. Central Agricultureprice Commission ಎಂದು ಹೇಳಿ 25 ಕೋಟಿ ರೂ.ಗಳನ್ನು ಖರ್ಚು ಮಾಡಿ, ಪ್ರತಿ ವರ್ಷ ರೈತರ ಸಂಪೂರ್ಣ ಬೆಳೆಗಳಿಗೆ ಬೆಲೆಯನ್ನು ನಿಗದಿ ಮಾಡುವುದಕ್ಕೆ ಒಂದು ಸಮಿತಿಯನ್ನು ಮಾಡಿದೆ. ಇದಕ್ಕೆ ಯಾವುದಾದರೂ ಮಾನದಂಡ ಇದೆಯೇ? ನಾನು ಇಲ್ಲಿರುವ ಹಿರಿಯ ಸದಸ್ಯರಿಗೆ ಪ್ರಶ್ನೆ ಮಾಡುತ್ತೇನೆ. ಈ ದೇಶದಲ್ಲಿ ಯಾರು ಯಾವ ಪುಸ್ತಕ ಬರೆದಿದ್ದಾರೆ? ಈ ದೇಶದಲ್ಲಿ Agriculture Loss ಬಗ್ಗೆ, Agriculture Investment ಬಗ್ಗೆ ಯಾರಾದರೂ ಪುಸ್ತಕ ಬರೆದಿದ್ದಾರೆಯೇ? ಯಾರಾದರೂ ಒಬ್ಬರು ಒಂದು ಪುಸ್ತಕವನ್ನು ಭಾರತದ ಆರ್ಥಿಕ ತಜ್ಞರು ಬರೆದಿದ್ದಾರೆ ಇಲ್ಲಿ ಕೇಳಬಹುದು. ಒಂದು ಉದ್ಯೋಗಕ್ಕೆ ಒಂದು ನೀತಿಯನ್ನೇ ಬರೆಯದೇ ಇದ್ದ ಮೇಲೆ ರೈತರನ್ನು ಯಾವ ರೀತಿ ರಕ್ಷಣೆ ಮಾಡುವುದು? ಅದು ಸಾಧ್ಯವೇ ಇಲ್ಲ. ಸಮಯಕ್ಕೆ ಏನೋ MSP ಎಂದು ಒಂದು English ನಲ್ಲಿ ಮೋಸ ಇಲ್ಲ ಒಂದು ಸಾರಿ MSP, ಅಂದರೆ minimum support price, ಇನ್ನೊಂದು ಸಾರಿ Statutory minimum price ಅಂದರು. ಈಗ MRP, Minimum

Remunerative price. ಬ್ರಿಟಿಷರು ಹೋದ ಮೇಲೆ ಈ ಅಕ್ಷರಗಳ ಮೂಲಕ ಮೋಸ ಮಾಡುವಂಥ ಕೆಲಸ ಶುರುವಾಗಿದೆ. ಈ ಮೂರು ಒಂದೇ ಅರ್ಥದಿಂದ ಕೂಡಿದೆ. ಇವರು ಸಮಾಧಾನ ಮಾಡುವುದಕ್ಕೆ 90 ರೂ.ಗಳು, 80 ರೂ.ಗಳು tax ಕಟ್ಟುವುದಕ್ಕೆಂದು ಮಾಡುತ್ತಾರೆ. ಈಗ ಭತ್ತಕ್ಕೆ 290 ರೂ.ಗಳ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ್ದಾರೆ. ಆದ್ದರಿಂದ ಇಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಶುರು ಮಾಡಿಸುವುದಕ್ಕೆ ಬಹಳ ತ್ವರಿತವಾಗಿ ನಾಳೆಯೇ ಸಕ್ಕರೆ ಮಾಲೀಕರ ಒಂದು ಮೀಟಿಂಗ್ ಅನ್ನು ಕರೆದು ಕಾರ್ಖಾನೆಯನ್ನು ಶುರು ಮಾಡಿ, ರೈತರು ಕಬ್ಬು ಸಾಗಿಸುವುದಕ್ಕೆ ವ್ಯವಸ್ಥೆ ಮಾಡಿ. ತಾವು ಹೇಳಿದಂತೆ ಸಕ್ಕರೆಯಿಂದ 13 ಸಾವಿರ ಕೋಟಿ ರೂ.ಗಳ ಅದಾಯ ಬರುತ್ತದೆ. ಅದರಲ್ಲಿ ಒಂದು ಟನ್‌ಗೆ ಕನಿಷ್ಠ 300 ರಿಂದ 400 ರೂ ಗಳ ಗೌರವಧನ ಕೊಡುವುದರ ಮೂಲಕ ರೈತರು ಮತ್ತು ಕಾರ್ಖಾನೆಗಳ ರಕ್ಷಣ ಮಾಡುವ ಪ್ರಯತ್ನ ಮಾಡಬೇಕು. ಇನ್ನೊಂದು ವಿಚಾರ ಏನೆಂದರೆ, ಸಕ್ಕರೆ ದರ ಜಾಸ್ತಿಯಾದ ಮೇಲೆ ಒಂದು ಮೀಟಿಂಗ್ ಮಾಡುತ್ತೇವೆಂದು ಹೇಳುತ್ತೀರಿ ಅದು 30 ರಿಂದ 31, 32 ರೂ.ಗಳಾದಾಗ ಒಂದು ಮೀಟಿಂಗ್ ಮಾಡುವ ಕೆಲಸವನ್ನು ಮಾಡುತ್ತೇವೆಂದು ಹೇಳಿ, ಸಮಿತಿ ವರದಿಯನ್ನು ಕೊಟ್ಟಿದೆ. ಎಲ್ಲರೂ ಸೇರಿ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗಿ, ಸಕ್ಕರೆಯ ಮೇಲೆ ಇರತಕ್ಕಂಥ ನಿಯಂತ್ರಣವನ್ನು ತೆಗೆದು ಹಾಕಿದ್ದೀರಿ, ಇದನ್ನು ತೆಗೆದು ಹಾಕಬೇಕೆಂದು ಬಹಳ ಜನರು ಹೋರಾಟ ಮಾಡಿದರು. ಅದನ್ನು ತೆಗೆದು ಹಾಕಿದ ಮೇಲೆ ಬೆಲೆ ಕುಸಿಯಿತು, ಈಗ ಸಂಪೂರ್ಣ ಮಾರ್ಕೆಟ್ ಯಾರ ಕೈಯಲ್ಲೂ ಇಲ್ಲ. ಇದು ಸಂಪೂರ್ಣವಾಗಿ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ, ನಿಯಂತ್ರಣ ಮಾಡುವಂಥ ಶಕ್ತಿ ಇಲ್ಲವೇ ಇಲ್ಲ. ದಿನೇ ದಿನೇ ಸಕ್ಕರೆ ಬೆಲೆ ಕುಸಿಯುತ್ತಿರುವಂಥದ್ದು ಸತ್ಯ, ಅದರಲ್ಲೂ ನಾವು ರೈತ ಸಂಘದ ಹೋರಾಟಗಾರರು 4000 ರೂ.ಗಳನ್ನು, 5,000 ರೂ.ಗಳನ್ನು ಕೊಡಬೇಕೆಂಬುದು ಬೇರೆ ಪ್ರಶ್ನೆ, ಇವತ್ತು ಜೀವನ ನಡೆಸಬೇಕೆಂದರೆ 5,000 ರೂ.ಗಳನ್ನು ಕೊಡಬೇಕು. ಆದ್ದರಿಂದ ಈಗ ಸರ್ಕಾರ ಮಧ್ಯೆ ಪ್ರವೇಶ ಮಾಡುವುದಕ್ಕೆ ಆಗದೇ ಹೋದರೆ ಏನು ಮಾಡುವುದಕ್ಕೆ ಸಾಧ್ಯವಿಲ್ಲ, ಬಹಳ

ಜನ ಮಾಲೀಕರು ಆಲೋಚನೆಗಳನ್ನು ಹೇಳಿ ಮಾಡಿದ್ದಾರೆ ಈಗ ಕಾರ್ಖಾನೆ ಪ್ರಾರಂಭವಾಗದೇ ಹೋದರೆ ರೈತರು ಇವತ್ತು ಬೀದಿ ಪಾಲಾಗುತ್ತಾರೆ. ಇವತ್ತು ಯಾವ ಪರಿಸ್ಥಿತಿ ಬಂದಿದ್ದಾರೆಂದರೆ, ಕೆಲವರು ಹೋರಾಟ ಮಾಡುತ್ತಿದ್ದಾರೆ, ಕೆಲವರು ಮರೆಯಲ್ಲಿ ಬಂದು ಕೊಟ್ಟಷ್ಟು ಕೊಡಿ ಸ್ವಾಮಿ, ನಾವು ಕಬ್ಬು ಹೊಡೆಯುತ್ತೇವೆಂಬ ಸ್ಥತಿಗೆ ತಲುಪುವಂಥ ಒಂದು ವ್ಯವಸ್ಥೆಗೆ ಬಂದಿದೆ, ರೈತರು ಆ ದಯನೀಯ ಸ್ಥಿತಿಗೆ ಬಂದಿರುವುದರಿಂದ ಸರ್ಕಾರ ದಯವಿಟ್ಟು ಮಧ್ಯೆ ಪ್ರವೇಶ ಮಾಡಬೇಕು. ಏಕೆಂದರೆ, ಒಂದು ಸಾರಿ ಬೆಳೆ ನಷ್ಟವಾದರೆ, ಈ ರೀತಿ ನಮ್ಮ ಕಡೆ ಅಂತ ಸಮಸ್ಯೆ ಇಲ್ಲ. ಉತ್ತರ ಕರ್ನಾಟಕದಲ್ಲಿ ಬಹಳ ದೊಡ್ಡ ಸಮಸ್ಯೆ ಇದೆ. ನಮ್ಮ ಕಡೆ ಕಾವೇರಿ ವಿವಾದದಿಂದ ಕಬ್ಬು ಬೆಳೆ ಇಲ್ಲ, ಕಬ್ಬು ಕಡಿಮೆಯಾಗಿದೆ. ಇವತ್ತು ನಾಲ್ಕನೇ ಮೂರು ಭಾಗ ಕಬ್ಬು ನಿಂತಿದೆ. ಸುಮಾರು 30–32 ಕಾರ್ಖಾನೆಗಳು Start ಆಗಿಲ್ಲ. ದಯವಿಟ್ಟು ಇದರ ಬಗ್ಗೆ ಬಹಳ ಗಂಬೀರವಾಗಿ ಮಾನ್ಯ ಸಕ್ಕರೆ ಮಂತ್ರಿಯವರು ಯೋಚಿಸಿ ಇದನ್ನು ನೀವು ಬೆಳೆಯುತ್ತಿರೋ ಅವರು ಬೆಳೆಯುತ್ತಾರೋ ಅದು ಬೇರೆ ಪ್ರಶ್ನೆ. ನೀವಿಬ್ಬರೂ ಉತ್ತರ ಕರ್ನಾಟಕದವರು. ನೀವು ಅವರನ್ನು ಹೊಗಳುತ್ತೀರಿ, ಅವರು ನಿಮ್ಮನ್ನು ಹೊಗಳುತ್ತಾರೆ. ನಿಮ್ಮಿಬ್ಬರ ಮಧ್ಯೆ ರೈತರು ಸಿಕ್ಕಿಕೊಂಡು ಸಾಯುವಂಥ ಪರಿಸ್ಥಿತಿ ಇದೆ. ಇಲ್ಲಿಯೇ ಎಲ್ಲಾ ಕಾರ್ಖಾನೆಗಳ ಮಾಲೀಕರು ಇದ್ದೀರಿ, ಈ ಬಗ್ಗೆ ತೀರ್ಮಾನ ಮಾಡಿ. ದಯವಿಟ್ಟು ರಕ್ಷಣೆ ಮಾಡಬೇಕು, ನಾವು 12ನೇ ತಾರೀಖಿನಂದು ದೆಹಲಿಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅಂದು ಕಬ್ಬು ಬೆಳೆಗಾರರ ಒಂದು ದೊಡ್ಡ ಕಾರ್ಯಕ್ರಮವನ್ನು ಹಾಕಿ, ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಆದ್ದರಿಂದ ಸುಮ್ಮನೆ ಇರಬಾರದು, ತಾವು impor duty ಜಾಸ್ತಿ ಹಾಕಿದರೆ ಸಾಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ತಾವು ಸಕ್ಕರೆ ಮಂತ್ರಿಗಳ ಮೇಲೆ ಅನುಮಾನ ಪಡುವುದಕ್ಕೆ ಹೋಗಬೇಡಿ. ನಾವು ಹೊಗಳುತ್ತೇವೆಂದು ಅವರು ಏನು ಮಾಡುವುದಕ್ಕೆ ಹೋಗುವುದಿಲ್ಲ ಉತ್ತರ ಕರ್ನಾಟದಲ್ಲಿ ಏನಾದರೂ ಒಬ್ಬ ಗಂಡಸು ಮಂತ್ರಿ ಆಗಿದ್ದರೆ ಅವರು ಒಬ್ಬರೇ. ಅವರು ಎಲ್ಲಿಯವರೆಗೆ ರೆಡಿಯಾಗಿದ್ದಾರೆಂದರೆ, ಈ ಕಾರ್ಖಾನೆಯವರು ಒಂದು ವೇಳೆ ಬೆಲೆ ಕೊಡದೇ

ಹೋದರೆ ಕಾರ್ಖಾನೆಗಳನ್ನಾದರೂ ಬಂದ್ ಮಾಡಿಸುತ್ತೇನೆ, ಇಲ್ಲವೆಂದರೆ ನಾನಾದರೂ ರಾಜೀನಾಮೇ ಕೊಟ್ಟು ಹೋಗುತ್ತೇನೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಅವರ ಬಗ್ಗೆ ತಾವು ಹಗುರವಾಗಿ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :- ನಮಗೆ ಅವರು ರಾಜೀನಾಮೆ ಕೊಡುವುದು ಬೇಕಾಗಿಲ್ಲ. ನೀವು ಕಾರ್ಖಾನೆಗಳನ್ನು ಕಬ್ಜಾ ಮಾಡಿಕೊಳ್ಳುತ್ತೇನೆಂಬುದೂ ಬೇಕಾಗಿಲ್ಲ. ನಿಮಗೂ ಗೊತ್ತಿದೆ, ಅವರು ರಾಜೀನಾಮೆಯನ್ನು ಕೊಡುವುದಿಲ್ಲ. ನಿಮ್ಮ ಕಾರ್ಖಾನೆಗಳನ್ನು ಕಬ್ಜಾನೂ ಮಾಡಿಕೊಳ್ಳುವುದಿಲ್ಲವೆಂಬುದು ನಿಮ್ಮಗೆಲ್ಲರಿಗೂ ಗೊತ್ತಿದೆ, ಸುಮ್ಮನೆ ಕಬ್ಜಾ ಮಾಡಿಕೊಳ್ಳಿ ಎಂದು ಹೇಳಿ ಮೇಲ್ನೋಟಕ್ಕೆ ಒತ್ತಾಯ ಮಾಡುತ್ತೀದ್ದೀರಿ. ನಮಗೆ 100% ಗೊತ್ತಿದೆ, ಅವರು ನಿಮ್ಮ ಕಾರ್ಖಾನೆಗಳನ್ನು ಕಬ್ಜಾ ಮಾಡಿಕೊಳ್ಳುವುದಿಲ್ಲ. ಎಲ್ಲಾ ಕಾರ್ಖಾನೆಗಳನ್ನು ಸರ್ಕಾರ ಕೈಗೆ ತೆಗೆದುಕೊಂಡು ನಡೆಸುವುದಕ್ಕೆ ಹೋದರೆ, ಖಾಸಗಿಯವರಿಗೆ... ಏನು ಕೆಲಸ? ಅವರು ರಾಜೀನಾಮೆಯನ್ನು ಕೊಡುವುದಿಲ್ಲ. ರಾಜೀನಾಮೆ ಹೇಗೆ ಕೊಡುತ್ತಾರೆ? ಆದ್ದರಿಂದ ಇದು ಬಹಳ ಪ್ರಮುಖವಾದ ವಿಷಯವಾಗಿದ್ದು, ಇದರಿಂದ ಸುಮಾರು 26 ಕೋಟಿ ಉದ್ಯೋಗವನ್ನು ಸೃಷ್ಟಿ ಮಾಡುವಂಥದ್ದು, ನಾನು ನಿಜವನ್ನು ಹೇಳುತ್ತಿದ್ದೇನೆ, ಇದು ಬಹಳ ದೊಡ್ಡ ಉದ್ಯಮವಾಗಿದ್ದು, ಹತ್ತಿಯನ್ನು ಬಿಟ್ಟರೆ ಇದು ಎರಡನೆಯದು. ಇದರಿಂದ 26 ಕೋಟಿಯಷ್ಟು ಬಹಳ ದೊಡ್ಡ ಉದ್ಯೋಗವನ್ನು ಸೃಷ್ಟಿ ಮಾಡುವಂಥ ವಾಣಿಜ್ಯ ಬೆಳೆಗಳಲ್ಲಿ ಕಬ್ಬು ಬಹಳ ಪ್ರಮುಖವಾಗಿದ್ದು, ಇಲ್ಲಿ ರೈತರನ್ನು ಉಳಿಸಿ, ಕಾರ್ಖಾನೆಗಳನ್ನು ಉಳಿಸುವಂಥ ಕೆಲಸವನ್ನು ಮಾಡಬೇಕೆಂದರೆ ಹೇಳುತ್ತೇನೆ. ತಾವು ರೈತರನ್ನು ರಕ್ಷಣೆ ಮಾಡಬೇಕೆಂದರೆ ಪ್ರಾರಂಭ ಮಾಡಿ, ಸರ್ಕಾರ ಮಧ್ಯೆ ಪ್ರವೇಶ ಮಾಡಿ. ನಿಮ್ಮ ಸಮಸ್ಯೆಗಳ ಬಗ್ಗೆಯೂ ಆಲೋಚನೆ ಮಾಡಿ, ಅವರ ಸಮಸ್ಯೆಗಳ ಬಗ್ಗೆಯೂ ಆಲೋಚನೆ ಮಾಡಿ. ತಾವು ಪ್ರಾರಂಭ ಮಾಡದಿದ್ದರೆ ನಿಮಗಿಂತ ರೈತರಿಗೆ ಹೆಚ್ಚು ಅಪಾಯವಿದೆ, ಏಕೆಂದರೆ ಕಬ್ಬು ಬೆಳೆದು ನಿಂತು ಬಿಟ್ಟಿದೆ. ಮೊದಲೇ ಸುಕ್ರೋಸ್ ಕಡಿಮೆ ಆದರೆ ಅದರ ಕಥೆ ಮುಗಿದು ಹೋಗುತ್ತದೆ. ಏಕೆಂದರೆ, ಕಬ್ಬು ಸಂಪೂರ್ಣ ಗ್ಲೂಕೋಸ್ ಆದ

ಮೇಲೆ ಸಂಪೂರ್ಣ ಕಬ್ಬು ಕೊಳೆತು ಹೋದ ಮೇಲೆ ಏನು ಪ್ರಯೋಜನವಾಗುವುದಿಲ್ಲ. ದಯವಿಟ್ಟು ಇದು ಅತ್ಯಂತ ಗಂಭೀರವಾಗಿದ್ದು, ನಾಳೆಯಿಂದಲೇ ಕಾರ್ಖಾನೆಗಳನ್ನು ಶುರು ಮಾಡಿ ಎಂದು ಎಲ್ಲರೂ ಮಾನ್ಯ ಸಕ್ಕರೆ ಮಂತ್ರಿಯವರು ಮನವಿ ಮಾಡಿಕೊಳ್ಳಬೇಕು, ಮತ್ತೆ ನಿಮ್ಮ ಸಮಗ್ರ ಸಮಸ್ಯೆಗಳನ್ನು ಮಧ್ಯೆ ನಿಂತು ಬಗೆಹರಿಸುವುದರಲ್ಲಿ ನನ್ನ ಸರ್ಕಾರ ಕಟಿಬದ್ಧವಾಗಿದೆಯೆಂದು ಹೇಳಿದರೆ ಸಾಕು.

ಶ್ರೀ ಸಿ.ಎನ್.ಬಾಲಕೃಷ್ಣ(ಶ್ರವಣಬೆಳಗೊಳ) :- ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಇವತ್ತು ಕಬ್ಬು ಬೆಳೆಯುತ್ತಿರುವಂಥ ರೈತರು ಸಂಕಷ್ಟದ ಹಾದಿಯಲ್ಲಿದ್ದಾರೆ. ಅವರು ನೆಮ್ಮದಿಯ ಬದುಕನ್ನು ಕಂಡುಕೊಳ್ಳುವುದಕ್ಕೂ ಸಹ ಸಾಧ್ಯವಾಗಿಲ್ಲ. ನಮ್ಮ ಹಾಸನ ಜಿಲ್ಲೆಗೆ ಸಂವಂಧಿಸಿದಂತೆ ಸುಮಾರು 20000 ಎಕರೆಯಲ್ಲಿ ಕಬ್ಬು ಬೆಳೆಯುವುದಕ್ಕೆ ಅವಕಾಶವಿದೆ, ಆದರೆ ಉತ್ತರ ಕರ್ನಾಟಕದ ಪರಿಸ್ಥಿತಿಯೇ ಬೇರೆ, ದಕ್ಷಿಣ ಕರ್ನಾಟಕದ ಪರಿಸ್ಥಿತಿಯೇ ಬೇರೆಯಾಗಿದೆ. ನಮ್ಮ ದಕ್ಷಿಣ ಕರ್ನಾಟಕದ ಪರಿಸ್ಥಿತಿಯೇ ಬೇರೆಯಾಗಿದೆ. ನಮ್ಮ ದಕ್ಷಿಣ ಕರ್ನಾಟಕದಲ್ಲಿ ಜೂನ್ ತಿಂಗಳಲ್ಲೇ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಒಂದು ಟನ್‌ಗೆ ಸುಮಾರು 11 Point something ಇಳುವರಿ ಬರುತ್ತದೆ, ಆದರೆ ದಕ್ಷಿಣ ಕರ್ನಾಟಕದಲ್ಲಿ 9 1/2% recovery ಬರುತ್ತದೆ, ಏಕೆಂದರೆ ಇವತ್ತು ವೈಜ್ಞಾನಿಕ ಬೆಲೆಯನ್ನು ನಿಗದಿ ಮಾಡಿರುವಂತಹ ವಿಚಾರದಲ್ಲಿ ನಾಲ್ಕಾರು ವರ್ಷಗಳಿಂದ ಚರ್ಚೆಗಳಾಗಿಯೇ ಉಳಿದಿದೆಯೇ ಹೊರತು, ತೀರ್ಮಾನ ಮಾಡುವುದಕ್ಕೆ ಖಂಡಿತವಾಗಿಯೂ ಸಾಧ್ಯವಾಗಿಲ್ಲ. ಇವತ್ತು ರಾಜ್ಯ ಸರ್ಕಾರಗಳಿಗೆ ಈ ಒಂದು ವಿಚಾರದಲ್ಲಿ ಎಷ್ಟರಮಟ್ಟಿಗೆ ಅಧಿಕಾರವಿದೆ, ಇಲ್ಲವೇ, ಎನ್ನುವ ವಿಷಯ ಇದೆ ಮಾನ್ಯ ಸಕ್ಕರೆ ಸಚಿವರು ಮತ್ತು ಸಹಕಾರಿ ಸಚಿವರು ಇದರಲ್ಲಿ ಇದ್ದಾರೆ. ಈ ಸದಸದಲ್ಲೂ ಗೌರವಾನ್ವಿತ ಹಿರಿಯ ಸದಸ್ಯರು ಕಬ್ಬಿನ ಬಗ್ಗೆ, ರೈತರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಬೆಳಗಾವಿ ಅಧಿವೇಶನದ ಪ್ರಥಮ ದಿವಸವೇ ರೈತರ ಬಗ್ಗೆ, ಕಬ್ಬಿನ ವಿಚಾರವಾಗಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಿರುವಂಥದ್ದು ಕೂಡ ಸಂತೋಷದ

ವಿಷಯವಾಗಿದೆಯೆಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಬಫರ್ ಸ್ಟಾಕ್ ಹೆಚ್ಚಿನ ಪ್ರಮಾಣದಲ್ಲಿ ಇದ್ದರೂ ಕೂಡ ಕೇಂದ್ರ ಸರ್ಕಾರ ಅಗತ್ಯತೆಗಿಂತ ಹೆಚ್ಚಾಗಿ, ಅನಗತ್ಯವಾಗಿ ಬೇರೆ ದೇಶದಿಂದ ಸಕ್ಕರೆಯನ್ನು ಆಮದು ಮಾಡಿಕೊಳ್ಳಿತ್ತಿರುವುದೂ ಕೂಡ ರೈತರ ಮೇಲೆ ಬೀಳುತ್ತಿರುವ ಹೊರೆ ಡನ್ನುವುದನ್ನು ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಒಬ್ಬ ಸರ್ಕಾರಿ ನೌಕರ ಆರನೇ ವೇತನ ಆಯೋಗದ ಮೂಲಕ ಸಂಬಳವನ್ನು ಹೆಚ್ಚಿಗೆ ಮಾಡಿಕೊಳ್ಳುವುದು ಆಗಬಹಿದು ಅಥವಾ ಏಳನೇ ವೇತನ ಆಯೋಗದ ಮೂಲಕ ಸಂಬಳವನ್ನು ಜಾಸ್ತಿ ಮಾಡಿಕೊಳ್ಳುವುದು ಆಗಬಹುದು. ಆದರೆ ಸಕ್ಕರೆ ದರ ಜಾಸ್ತಿಯಾಗುವುದರಿಂದ ಅದನ್ನು ಕೊಳ್ಳತಕ್ಕಂಥವರ್‍ಯಾರೂ ಕೂಡ ಬೇಸರ ಮಾಡಿಕೊಳ್ಳುವುದಿಲ್ಲ. ರೈತರಿಗೆ ಅನುಕೂಲವಾಗುತ್ತದೆ ಎಂದಾಗ ಯಾರೂ ಕೂಡ ಚರ್ಚೆ ಮಾಡಲು ಹೋಗುವುದಿಲ್ಲ. ಕೇಂದ್ರ ಸರ್ಕಾರದ Commerce and industries ministry ಯಲ್ಲಿ ತೆಗೆದುಕೊಳ್ಳುವಂಥ ತೀರ್ಮಾನಗಳಿಂದ ರೈತರ ಹೊಟ್ಟಯ ಮೇಲೆ ಹೊಡೆಯುವಂಥ ಸ್ಥಿತಿ ಇವತ್ತು ದೇಶದಲ್ಲಿ ನಿರ್ಮಾಣವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸಕ್ಕರೆ ಸಚಿವರು ಮತ್ತು ಸಹಕಾರಿ ಸಚಿವರಿಗೆ ತಿಳಿಸಲು ಬಯಸುತ್ತೇನೆ. ಈ ಸಂದರ್ಭದಲ್ಲಿ ನಾನು ತಮಗಮ ಮೂಲಕ ಮನವಿ ಮಾಡುವುದೇನೆಂದರೆ ಉತ್ತರ ಕರ್ನಾಟಕದ ಸ್ಥಿತಿಯೇ ಬೇರೆ, ದಕ್ಷಿಣ ಕರ್ನಾಟಕದ ಸ್ಥಿತಿಯೇ ಬೇರೆ. ದಕ್ಷಿಣ ಕರ್ನಾಟಕದಲ್ಲಿ 9.5%ನ ಮೇಲೆ ರೆಕವರಿ ಬರುವುದಿಲ್ಲ, ಅಲ್ಲಿನ ಹವಾಗುಣಕ್ಕನುಗುಣವಾಗಿ ಅದಕ್ಕಿಂತ ಹೆಚ್ಚಾಗಿ ಬರುವುದಿಲ್ಲ. ಆದರೆ ಉತ್ತರ ಕರ್ನಾಟಕದಲ್ಲಿನ ಹವಾಗುಣದಲ್ಲಿ 1.5% ರೆಕವರಿ ಬರುತ್ತದೆ. ಬೆಂಬಲ ಬೆಲೆಯನ್ನು ಕೊಡುವಂಥ ಸಂದರ್ಭದಲ್ಲಿ ದಕ್ಷಿಣ ಕರ್ನಾಟಕಕ್ಕೆ ರೆಕವರಿ ಪರ್ಸೆಂಟೇಜ್ ಆಧಾರದ ಮೇಲೆ ಹೆಚ್ಚಿನ ಬೆಲೆ ಕೊಡುವಂಥ ರೀತಿಯಲ್ಲಿ ರಾಜ್ಯ ಸರ್ಕಾರ ಅವಕಾಶವನ್ನು ಮಾಡಿಕೊಡಬೇಕು ಎನ್ನುವುದನ್ನೂ ಸಹ ಈ ಸಂದರ್ಭದಲ್ಲಿ ನಾವು ಆಗ್ರಹಪೂರ್ವಕವಾಗಿ ಮನವಿ ಮಾಡಿತ್ತಿದ್ದೇವೆ. ಕಾರ್ಖಾನೆಗಳನ್ನು ಪ್ರಾರಂಭ ಮಾಡುವಂಥ ಸಂದರ್ಭದಲ್ಲಿ 15 ದಿವಸಗಳಲ್ಲೇ ರೈತರಿಗೆ ಪೇಮೆಂಟ್ ಕೊಡುತ್ತೇವೆ ಎಂದು ಹೇಳಿ ಪ್ರಾರಂಭ

ಮಾಡುತ್ತಾರೆ. ಆದರೆ ಕಬ್ಬು ಅರೆಯಲು ಪ್ರಾರಂಭವಾದ ಮೇಲೆ ಒಂದೂವರೆ ತಿಂಗಳಾದರೂ ಕೂಡ ಕಬ್ಬನ್ನು ಸರಬರಾಜು ಮಾಡಿದಂಥ ರೈತರಿಗೆ ಪೇಮೆಂಟ್ ಅನ್ನು ಕೊಡದೇ ಇವತ್ತು ರೈತರು ಬಹಳ ಸಾಲದಲ್ಲಿ ತಮ್ಮ ಜೀವನವನ್ನು ನಡೆಸುವಂಥ ಸ್ಥಿತಿ ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ. ಇವತ್ತು ಸರ್ಕಾರ 2,500 ರೂಪಾಯಿಗಳನ್ನು ನಿಗದಿ ಮಾಡಿದೆ. ಜೂನ್ ತಿಂಗಳಲ್ಲೇ ಕಾರ್ಖಾನೆಗಳು ಪ್ರಾರಂಭವಾಗಿರುವುದರಿಂದ ಒಂದು ಟನ್‌ಗೆ 2,100 ರೂಪಾಯಿಗಳನ್ನು ಕೊಡುಲು ತೀರ್ಮಾನ ಮಾಡಿದೆ. ಸರ್ಕಾರ ನಿಗದಿ ಮಾಡಿದ ಮೇಲೆ, 2.500 ರೂಪಾಯಿಗಳನ್ನು ಕೊಡುತ್ತೇವೆ ಎಂದು ತೀರ್ಮಾನವಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಸಹಕಾರ ಸಚಿವರು ಮತ್ತು ಸಕ್ಕರೆ ಸಚಿವರು ಗಮನ ಹರಿಸಿ 15 ದಿವಸಗಳಲ್ಲೇ ರೈತರಿಗೆ ಕಡ್ಡಾಯವಾಗಿ ಪೇಮೆಂಟ್ ಸಿಗುವಮತೆ ಸಂಬಂಧಪಟ್ಟ ಕಾರ್ಖಾನೆಗಳಿಗೆ ಸೂಚನೆಯನ್ನು ನೀಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತವನ್ನು ನಡೆಸುತ್ತಿರುವಂಥ ಸಂದರ್ಭದಲ್ಲಿ ಇಲ್ಲೂ ಕೂಡ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದರಿಂದ ರಾಜ್ಯದ ಹಿರಿಯರ ಒಂದು ನಿಯೋಗದ ಮೂಲಕ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು, ಒತ್ತಡವನ್ನು ತಂದು ಆಮದು ಮಾಡಿಕೊಳ್ಳುತ್ತಿರುವ ಸಕ್ಕರೆಯ ಪ್ರಮಾಣವನ್ನು ಕಡಿಮೆ ಮಾಡದೇ ಹೋದರೆ ಖಂಡಿತವಾಗಿ ರೈತರಿಗೆ ಆಗುತ್ತಿರುವಂಥ ಅನ್ಯಾಯವನ್ನು ಮುಂದಿನ ದಿನಗಳಲ್ಲಿ ಸರಿಪಡಿಸಲು ಸಾಧ್ಯವಿಲ್ಲ ಎನ್ನುವ ನಮ್ಮ ಅಭಿಪ್ರಾಯವನ್ನು ತಮ್ಮ ಮೂಲಕ ವ್ಯಕ್ತ ಮಾಡುತ್ತಿದ್ದೇವೆ. ಕಬ್ಬನ್ನು ಸರಬರಾಜು ಮಾಡುತ್ತಿರುವ ರೈತರಿಗೆ ದಯಮಾಡಿ ಪ್ರತಿ ಟನ್‌ಗೆ ಒಂದು ಸಾವಿರ ರೂಪಯಿ ಬೆಂಬಲ ಬೆಲೆಯನ್ನು ಕೊಡಬೇಕು. ಅದನ್ನು ಕೊಡುವಂಥ ಸಂದರ್ಭದಲ್ಲಿ ಇಳುವರಿ ಯಾವ ಭಾಗದಲ್ಲಿ ಕಡಿಮೆ ಬರುತ್ತಿದೆ ಎನ್ನುವ ಆಧಾರದ ಮೇಲೆ ನಿಗದಿ ಮಾಡಿ ದಕ್ಷಿಣ ಕರ್ನಾಟಕಕ್ಕೆ ಹೆಚ್ಚಿನ ರೀತಿಯಲ್ಲಿ ಕೊಡುವಂಥದ್ದಕ್ಕೆ ಅವಕಾಶವಾಗ ಬೇಕು. ಏಕೆಂದರೆ ಉತ್ತರ ಕರ್ನಾಟಕದಲ್ಲಿ ಕಬ್ಬಿನ fertility ಬೇರೆ, ಇಲ್ಲಿ ಒಂದು ಟನ್‌ಗೆ 11.5% ರೆಕವರಿ ಬರುತ್ತದೆ, ನಮ್ಮ ದಕ್ಷಿಣ ಕರ್ನಾಟಕ

ಭಾಗದಲ್ಲಿ ಒಂದು ಟನ್‌ಗೆ 9 5% ರೆಕವರಿ ಬರುತ್ತದೆ, ಹಾಗಾಗಿ ತಾರತಮ್ಯ ವಾಗದ ರೀತಿಯಲ್ಲಿ, ಇಳುವರಿ ಆಧಾರದ ಮೇಲೆ ಬೆಂಬಲ ಬೆಲೆಯನ್ನು ರೈತರ ಹಿತದೃಷ್ಟಿಯಿಂದ ಘೋಷಣೆ ಮಾಡಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಕ್ಕರೆ ಸಚಿವರು, ಮಾನ್ಯ ಸಹಕಾರ ಸಚಿವರು ಮತ್ತು ಗೌರವಾನ್ವಿತ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ.

ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ) :- ಮಾನ್ಯ ಅಧ್ಯಕ್ಷರೆ, ಇಲ್ಲಿ ನಡೆಯುತ್ತಿರುವ ಚರ್ಚೆಯನ್ನು ನಾನು ಕೇಳುತ್ತಿದ್ದೇನೆ. ಚರ್ಚೆಯಲ್ಲಿ ಏನಾಗು ತ್ತಿದೆ ಎಂದರೆ ಒಮದು ಕಡೆ ಸಕ್ಕರೆ ಫ್ಯಾಕ್ಟರಿಯವರಿದ್ದಾರೆ, ಇನ್ನೊಂದು ಕಡೆ ರೈತರಿದ್ದಾರೆ ನಿಜವಾಗಿಯೂ ಫ್ಯಾಕ್ಟರಿ ಮತ್ತು ರೈತರದ್ದು Common Interest ಆಗಿದೆ. ಅದನ್ನು ಹೇಗೆ solve ಮಾಡಬೇಕು ಎನ್ನುವುದನ್ನು ಬಿಟ್ಟು ರೈತರು ಒಂದು ರೀತಿಯ ಪರಿಹಾರವನ್ನು ಕೇಳುತ್ತಿದ್ದಾರೆ Every year crisis ಜಾಸ್ತಿ ಆಗುತ್ತಾ ಇದೆ. There is no permanent solution There has to be a permanent solution Permanent solution can come only through good and true economic working There is a tax of Rs 3200/- on fixing of control price of Rs 2,500/- per tonner But on the same side, it is an open market We cannot have one side control of the economy and on the other side you cannot have the open market It will never work It is either like a communist country, both we have to be open like the emergent system So, what we are trying to do is that it has one side control and one side open My suggestion is there should be a formula The formula is very simple to work out ಏಕೆಂದರೆ ರೈತರಿಗೂ ಗೊತ್ತು, if lead the factories shut down, they will suffer Especially in my constituency Bidar they are totally dependent on sugar factories If sugar factories shut down or cause delay, ನಮ್ಮ ಎಲ್ಲಾ ರೈತರಿಗೆ ಬಹಳ ಲುಕ್ಸಾನು ಆಗುತ್ತದೆ.That is Why, I would like to thank our Co-operation Minister ಮತ್ತು ನಮ್ಮ ಗುರುಪಾದಪ್ಪನವರು, ನಮ್ಮ ಬೀದರ್ ಷುಗರ್

ಫ್ಯಾಕ್ಟರಿಗಳಿಗೆ help ಮಾಡಿದ್ದಾರೆ. They saved us from disaster Because we have not paid money to the farmers for last two years, ಅವರ help ನಿಂದ ನಮಗೆ temporary/lead relief ಆಗಿದೆ But we don't want to continue this system like having a heart attack to heart attack we want a permanent solution A permanent solution can come only through good and true economic working condition Then evertbody will be happy and somebody told me one of the best negotiations is when everybody works out on table I am happy because every body is getting something out of it There excise duty of Rs 3,200/- It is just a formula I am suggesting you take the cost of sugar What is the market price? Add 1/3rd of the excise duty you are collecting and split that into farmers and sugar factories 80 20 I think your experts in the bureaucracy, they can work it out So, there has to be a permanent solution We cannot debate here on the same thing every year over and over again and have a problem and for example you take they are talking about support price One of the issues, they told me, suppose you give the support price to the sugar factories, then for paddy, wheat, jawar, everybody starts asking for support price But unlike the other things, here in the sugar factories, the Government is cashing lot of money through the excise duty on the molasses So, justification is required and also it is a very perishable product ರೈತ ಸಂಘದ ಅಧ್ಯಕ್ಷರಾದ ಶ್ರೀ ಪುಟ್ಟಣ್ಣಯ್ಯರವರು ಹೇಳಿದ ರೀತಿ it is a perishable commodity as every day you delay every body is the loser So there is no strength in having these factories to get into disaster Try to have a rescue plan I have seen that with all the factories to get into disaster Try to have a rescue plan I have seen that with all the factories which

the Government was running For example, NGEF, you take any other factories like HMT, we ran them into hole and now we are trying to find a rescue plan, whivh could never happen So before our factories get into that kind of situation or rates go down My request is let every body sit down and you make them sit in a room and they will not leave that room till they come with a proper solution and I hope that could be done, because our life blood is sugar factories So, please help us My request is both on the raitha sangha's side on the farmers side as well as the people and also bankers DCC ಬ್ಯಾಂಕ್‌ನವರು ನಮಗೆಲ್ಲಾ 15% interest charge/lead ಮಾಡುತ್ತಾರೆ. ಅವರಿಗೆ ಸ್ವಲ್ಪ interest ಕಡಿಮೆ ಮಾಡುವುದಕ್ಕೆ ಹೇಳುತ್ತೇವೆ. we should sit together and come out with a permanent solution with a permanent formula, because every body knows this is what we get So, if they don't want to grow sugar, they need not grow sugar If they think they are happy with it, they can grow sugar This is my request So let us have a quick solution Thank you

ಉಪಾಧ್ಯಕ್ಷರು :- ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಿದೆ.

(ಸದನವನ್ನು ರಾತ್ರಿ 7 ಗಂಟೆ 8 ನಿಮಿಷಕ್ಕೆ ಮುಂದೂಡಲಾಯಿತು ಸದನವುಪುನಃ ದಿನಾಂಕ 26.11.2013ರಂದು ಬೆಳಿಗ್ಗೆ 11 00 ಗಂಟೆಗೆ ಸೇರಲು ತೀರ್ಮಾನಿಸಿತು)

ಅನುಬಂಧ-1

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಕಾಲುವೆಗಳ ದುರಸ್ತಿ